ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಚೆನ್ನೈನಲ್ಲಿ ಭಾನುವಾರ ಅಫ್ಘಾನಿಸ್ತಾನ ವಿರುದ್ಧ ನಡೆದ ಟಿ-20 ವಿಶ್ವಕಪ್ ಪಂದ್ಯದಲ್ಲಿ ನ್ಯೂಜಿಲೆಂಡ್ 5 ವಿಕೆಟ್ ಗಳಿಂದ ಗೆಲುವು ಸಾಧಿಸಿತು.

09 ಫೆಬ್ರವರಿ 2026 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 325 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629




ಫೆಬ್ರವರಿ : ಕಿರಿಯ ತಿಂಗಳ ಹಿರಿಮೆಯ ಕುರಿತೊಂದು ಲಹರಿ » 2



ರಷ್ಯಾದಿಂದ ತೈಲ ಖರೀದಿ ಸ್ಥಗಿತಕ್ಕೆ ಮುಂದಾದ ಭಾರತ » 3



ಭಯೋತ್ಪಾದನೆ ವಿಚಾರದಲ್ಲಿ ಎಂದಿಗೂ ದ್ವಿಮುಖ ನೀತಿ ಇಲ್ಲ : ಮೋದಿ » 4


# ಅಭಿವೃದ್ಧಿಗಿಂತ ರಾಜಕೀಯ ಕಾದಾಟವೇ ಮುಖ್ಯ

## ರಾಜ್ಯ ಸರ್ಕಾರದ ವಿರುದ್ಧ ಹೆಚ್.ಡಿ.ಕೆ. ಕಿಡಿ | ರಾಜ್ಯದಲ್ಲಿ ಖಾಲಿ ಚೊಂಬಿನ ಸರ್ಕಾರ

• ಪ್ರಜೋದಯ ವರದಿ

**ಬೆಂಗಳೂರು:** ಕೇಂದ್ರ ಸರ್ಕಾರದ ಅನುದಾನವನ್ನು ಸದುಪಯೋಗ ಪಡಿಸಿಕೊಳ್ಳದೆ ವಿನಾಕಾರಣ ಆರೋಪ ಮಾಡುತ್ತಿರುವ ರಾಜ್ಯ ಸರ್ಕಾರಕ್ಕೆ ಖಾಲಿ ಚೊಂಬಿನ ಕ್ರೆಡಿಟ್ ಸಲ್ಲುತ್ತದೆ. ಇವರಿಗೆ ಅಭಿವೃದ್ಧಿಗಿಂತ ರಾಜಕೀಯ ಕಾದಾಟವೇ ಮುಖ್ಯವಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಟೀಕಾ ಪ್ರಹಾರ ನಡೆಸಿದರು.

ಭಾನುವಾರ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರದ 53ಕ್ಕೂ ಹೆಚ್ಚಿನ ಯೋಜನೆಗಳ ಪ್ರಯೋಜನವನ್ನು ರಾಜ್ಯ ಸರ್ಕಾರ ಬಳಕೆ ಮಾಡಿ ಕೊಳ್ಳುತ್ತಿಲ್ಲ. ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರ ಬಜೆಟ್ ವಿರುದ್ಧ ಟೀಕೆ ಮಾಡುತ್ತಿದ್ದಾರೆ. 16ನೇ ಹಣಕಾಸು ಆಯೋಗದಿಂದ ರಾಜ್ಯಕ್ಕೆ 50 ಸಾವಿರ ಕೋಟಿ ರೂ. ಬರಬೇಕಿತ್ತಾದರೂ ಅದನ್ನು 63 ಸಾವಿರ ಕೋ.ರೂ.ಗೆ ಏರಿಸಲಾಗಿದೆ. ಆದರೂ ಇವರಿಗೆ ತೃಪ್ತಿಯಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.



> ರಾಜ್ಯದ ಪರಿಸ್ಥಿತಿ ನೋಡಿದರೆ ಬಹಳ ನೋವಾಗುತ್ತದೆ. ಇಲ್ಲಿನ ಸದ್ಯದ ರಾಜಕೀಯ ವಾತಾವರಣ ನೋಡಿದರೆ ನಾನು ಇಲ್ಲಿಯೇ ಇಲ್ಲಿರಬೇಕಿತ್ತು ಎನಿಸುತ್ತಿದೆ. ಸಮಯ ಬಂದಾಗ ವಾಪಸ್ಸು ಬರುತ್ತೇನೆ.
>
> -ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

### ಜೆಡಿಎಸ್ ಮುಗಿಸುವುದು ಭ್ರಮೆ

ಸಿನಿಮಾ ರಂಗದಲ್ಲಿ ದುಡಿದ ದುಡ್ಡಲ್ಲಿ 43 ಎಕರೆ ಭೂಮಿ ಖರೀದಿಸಿದ್ದೆ. ನನ್ನ 4 ಎಕರೆ ವಶಪಡಿಸಿಕೊಳ್ಳಲಿಕ್ಕೆ ಎಸ್ಐಟಿ ಬೇರೆ ರಚಿಸಿದ್ದಾರೆ. ನನಗೆ ಎಷ್ಟೊಂದು ಕಿರುಕುಳ ನೀಡುತ್ತಿದ್ದಾರೆಂಬುದು ನನಗಷ್ಟೇ ಗೊತ್ತು. ಇನ್ನೂ ಎರಡು ಪ್ರಕರಣ ಎದುರಿಸುತ್ತಿದ್ದೇನೆ. ದೇವೇಗೌಡರ ಜೊತೆ ಬೆಳೆದುಬಂದ ಸಿದ್ದರಾಮಯ್ಯ ಹೀಗೆ ಮಾಡುತ್ತಿದ್ದಾರೆ. ಜೆಡಿಎಸ್ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ. ಮುಗಿಸುತ್ತೇವೆ ಎಂದರೆ ಅದು ಅವರ ಭ್ರಮೆ ಅಷ್ಟೇ. ಲಕ್ಷಾಂತರ ಕಾರ್ಯಕರ್ತರು ಜೆಡಿಎಸ್ ಪಕ್ಷ ಕಟ್ಟಿದ್ದಾರೆ. ಮುಂದಿನ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿಯಿಂದ ಮೈಸೂರು ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರ ಗೆಲ್ಲುತ್ತೇವೆಂದು ಕುಮಾರಸ್ವಾಮಿ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಪುನಶ್ಚೇತನಕ್ಕೆ ಕೇಂದ್ರ ಸರ್ಕಾರ ಬದ್ಧವಾಗಿದೆ. ಅದಕ್ಕಾಗಿ 4,000 ರಿಂದ 5,000 ಕೋಟಿ ರೂ. ಹೂಡಿಕೆ ಮಾಡುತ್ತಿದ್ದೇವೆ. ಸೇನೆ ಮತ್ತು ವೈಮಾನಿಕ ಕ್ಷೇತ್ರಕ್ಕೆ ಅತ್ಯಗತ್ಯವಾಗಿ ಬೇಕಿರುವ ಸ್ಪೆಷಾಲಿಟಿ ಸ್ಟೀಲ್ ಉತ್ಪಾದನೆಗೆ ಬಂಡವಾಳ ಹಾಕುತ್ತಿದ್ದೇವೆ. ಹಾಗೆಯೇ ಹೆಚ್ಎಂಟಿ ಕಾರ್ಖಾನೆ ಪುನಶ್ಚೇತನಕ್ಕೂ ಕೆಲಸ ಮಾಡುತ್ತಿದ್ದೇನೆ. ಆದರೆ, ರಾಜ್ಯ ಸರ್ಕಾರ ಅದಕ್ಕೂ ಕೊಕ್ಕೆ ಹಾಕಲು ಹೊರಟಿದೆ. ಅರಣ್ಯ ಇಲಾಖೆ ಹೆಚ್ಎಂಟಿ ಜಾಗ ನಮ್ಮದು ಎಂದು ತಕರಾರು ಎತ್ತಿದೆ. ಹೀಗಾದರೆ ನಾನು ಏನು ಮಾಡಲಿ ಎಂದು ಪ್ರಶ್ನಿಸಿದರು. ಕುದುರೆಮುಖ ಕಬ್ಬಿಣ ಮತ್ತು ಅದಿರು ಸಂಸ್ಥೆಗೆ ಬಳ್ಳಾರಿಯ ಸಂಡೂರಿನಲ್ಲಿ ರಾಜ್ಯ ಸರ್ಕಾರವೇ ಗಣಿ ಹಂಚಿಕೆ ಮಾಡಿದೆ. ಇನ್ನೊಂದೆಡೆ ಅಲ್ಲಿ ಆ ಸಂಸ್ಥೆ ಗಣಿಗಾರಿಕೆ ನಡೆಸುವುದಕ್ಕೆ ಅಡ್ಡಿಪಡಿಸುತ್ತಿದೆ. ಕೇಂದ್ರ ಸಚಿವನಾಗಿ ಒಂದೂವರೆ ವರ್ಷ ಕಳೆದರೂ ಈ ವರೆಗೆ ರಾಜ್ಯದ ಒಬ್ಬ ಸಚಿವ ನನ್ನನ್ನು ಭೇಟಿ ಮಾಡಿ ಚರ್ಚಿಸಿಲ್ಲ. ಮೊದಲು ಕೇಂದ್ರದ ಜೊತೆ ಒಳ್ಳೆಯ ಸಂಬಂಧ ಬೆಳೆಸಿ ಯೋಜನೆ ಪಡೆಯಲು ಪ್ರಯತ್ನಿಸಿ. ನಿಮ್ಮ ನಡವಳಿಕೆ ಬದಲಿಸಿಕೊಳ್ಳಿ. ಎಲ್ಲಕ್ಕೂ ಕೇಂದ್ರದತ್ತ ಬೆರಳು ಮಾಡುವುದಾದರೆ ರಾಜ್ಯ ಸರ್ಕಾರ ಏಕೆ ಇರಬೇಕೆಂದು ಖಾರವಾಗಿ ಪ್ರಶ್ನಿಸಿದರು.

**ಜಿ.ಟಿ.ಡಿ. ಕುರಿತು ಮಾತು ಬೇಡ**

ಶಾಸಕ ಜಿ.ಟಿ.ದೇವೇಗೌಡರು ನಮ್ಮ ಜೊತೆಯಲ್ಲಿ ಇಲ್ಲ. ಅವರ ಬಗ್ಗೆ

» ನಾಲ್ಕನೇ ಪುಟದಲ್ಲಿ

## ಸಾರಿಗೆ ಸಂಸ್ಥೆಯ ಖಾಲಿ ಜಾಗ ಪ.ಪಂ.ಗೆ : ಚರ್ಚೆ ಬಳಿಕ ನಿರ್ಧಾರ

• ಪ್ರಜೋದಯ ವರದಿ

**ಅರಕಲಗೂಡು :** ಸಾರಿಗೆ ಇಲಾಖೆಗೆ ಸೇರಿದ ಒಂದೂವರೆ ಎಕರೆ ಜಾಗವನ್ನು ಪಟ್ಟಣ ಪಂಚಾಯಿತಿಗೆ ಬಿಟ್ಟು ಕೊಡುವ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ನಿರ್ಧರಿಸಲಾಗುವುದೆಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಹೇಳಿದರು.



ಭಾನುವಾರ ಸೋಮವಾರ ಪೇಟೆಗೆ ತೆರಳುತ್ತಿದ್ದ ಅವರು ಶಾಸಕ ಎ. ಮಂಜು ಅವರ ಮನವಿ ಮೇರೆಗೆ ಸ್ಥಳಕ್ಕಾಗಮಿಸಿ ಪರಿಶೀಲಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ಎರಡು ಬಸ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಹೊಸ ಬಸ್ ನಿಲ್ದಾಣಕ್ಕೂ ಅಧಿಕ ಜಾಗವಿದೆ. ಹಳೆಯ ಬಸ್ ನಿಲ್ದಾಣಕ್ಕೆ ಶಾಸಕರು ಒಂದು ಎಕರೆ ಜಾಗ ನೀಡಿದ್ದಾರೆ. ಸುಮಾರು ಒಂದೂವರೆ ಎಕರೆ ಜಾಗ ಪಟ್ಟಣದ ಹೃದಯಭಾಗದಲ್ಲಿ ಅನುಪಯುಕ್ತವಾಗಿದೆ. ಬಳಕೆ ಸಲುವಾಗಿ ಪಟ್ಟಣ ಪಂಚಾಯಿತಿಗೆ ಬಿಟ್ಟು ಕೊಡುವಂತೆ ಕೇಳಿಕೊಂಡಿದ್ದಾರೆ. ಈ ಜಾಗ ಸಂಸ್ಥೆಗೆ ಅಗತ್ಯವಿದೆಯೋ ಇಲ್ಲವೋ ಎಂಬುದರ ಬಗ್ಗೆ ಕೂಡಲೇ ಸಮಾಲೋಚನೆ ನಡೆಸಿ ಕ್ರಮ ಕೈಗೊಳ್ಳಲಾಗುವುದೆಂದರು.

**ಜಾಹೀರಾತು ಫಲಕ ತೆರವಿಗೆ ಸೂಚನೆ**

ಸಾರಿಗೆ ಸಂಸ್ಥೆ ಬಸ್‌ಗಳ ಮೇಲೆ ಅಂಟಿಸುತ್ತಿದ್ದ ತಂಬಾಕು ಬಳಕೆ ಜಾಹೀರಾತುಗಳ ಫಲಕ ಹಾಗು ಬಂಟಿಂಗ್ಸ್ ತೆರವಿಗೆ ಸೂಚನೆ ನೀಡಲಾಗಿದೆ. ಎಲ್ಲಾ ನಿಗಮಗಳ ಬಸ್‌ಗಳಲ್ಲಿ ಅಳವಡಿಸಿರುವ ಜಾಹೀರಾತು ತೆರವು ತ್ವರಿತವಾಗಿ ಆಗಲಿದೆ. ತಾಲ್ಲೂಕಿನಲ್ಲಿ ಎರಡು ಬಸ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಹೆಚ್ಚುವರಿ ಬಸ್ ಮಾರ್ಗಗಳ ಕುರಿತು ಲಿಖಿತ ಮಾಹಿತಿ ನೀಡಿದರೇ ಬಸ್ ವ್ಯವಸ್ಥೆಯನ್ನು ಮಾಡಲಾಗುವುದು. ಕೆಲವು ಗ್ರಾಮೀಣ ಭಾಗದ ಬಸ್ ಸೇವೆಯನ್ನು ಸ್ಥಗಿತಗೊಳಿಸಿದ್ದು, ಕೂಡಲೇ ಆರಂಭಿಸಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

**ಪೊಲೀಸರು ಕ್ರಮ ಕೈಗೊಳ್ಳಬೇಕು**

ಪಟ್ಟಣದ ಬಸ್ ನಿಲ್ದಾಣದಲ್ಲಿ ಪುಂಡರ ಹಾವಳಿ ಹೆಚ್ಚಿದೆ. ನಿಲ್ದಾಣದಲ್ಲಿ ಖಾಸಗಿ ವಾಹನಗಳ ಓಡಾಟ, ಕಾಲೇಜು ವಿದ್ಯಾರ್ಥಿನಿಯರಿಗೆ ತೊಂದರೆ ನೀಡುವುದು, ಖಾಸಗಿ ವಾಹನ ನಿಲ್ದಾಣವಿದ್ದರೂ ಬಳಕೆ

» ನಾಲ್ಕನೇ ಪುಟದಲ್ಲಿ

## ರಕ್ಷಣೆ ಕೋರಿದ ಮಹಿಳೆಗೆ ಬೆದರಿಕೆ ಹಾಕಿದ ಪೊಲೀಸ್

### ಅರಕಲಗೂಡು ಎಎಸ್ಐ ದೇವರಾಜು ದುಂಡಾವರ್ತನೆ | ಕ್ರಮದ ಭರವಸೆ ನೀಡಿದ ಎಸ್‌ಪಿ

• ಪ್ರಜೋದಯ ವರದಿ

**ಅರಕಲಗೂಡು:** ಪತಿ ಮನೆಯವರಿಂದ ಹಲ್ಲೆಗೆ ಒಳಗಾಗಿ ರಕ್ಷಣೆ ಕೋರಿದ ಮಹಿಳೆಗೆ ಪೊಲೀಸ್ ಅಧಿಕಾರಿ ಮನೆ ಬಾಗಿಲಿಗೆ ಬಂದು ಅಮಾನವೀಯವಾಗಿ ವರ್ತಿಸಿ ಬೆದರಿಕೆ ಹಾಕಿರುವ ಘಟನೆ ಶನಿವಾರ ನಡೆದಿದೆ.

ಪಟ್ಟಣ ಠಾಣೆ ಎಎಸ್ಐ ದೇವರಾಜು ಎಂಬುವವರು ಮಹಿಳೆಯನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ. ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಅವರು ಪ್ರತಿಕ್ರಿಯಿಸಿ, ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.



> ಎಎಸ್ಐ ದೇವರಾಜು ನೊಂದ ಮಹಿಳೆಯೊಂದಿಗೆ ಅನುಚಿತವಾಗಿ ವರ್ತಿಸಿರುವ ವಿಷಯ ಗಮನಕ್ಕೆ ಬಂದಿದೆ. ಈ ಬಗ್ಗೆ ಪರಿಶೀಲಿಸಿ ಶಿಸ್ತು ಕ್ರಮ ಜರುಗಿಸಲಾಗುವುದು. ಸಾರ್ವಜನಿಕರೊಂದಿಗೆ ಪೊಲೀಸ್ ಅಧಿಕಾರಿ, ಸಿಬ್ಬಂದಿ ಅನುಚಿತವಾಗಿ ವರ್ತಿಸಿದರೆ ಯಾವ ಕಾರಣಕ್ಕೂ ಸಹಿಸುವುದಿಲ್ಲ.
>
> -ಶುಭಾನ್ವಿತಾ, ಎಸ್‌ಪಿ.

ಪಟ್ಟಣದ ಕೋಟೆ ಬ್ರಾಹ್ಮಣ ಬೀದಿಯಲ್ಲಿ ವಾಸವಾಗಿರುವ ಅರ್ಪಿತಾ ಎಂಬ ಮಹಿಳೆ ಮೇಲೆ ವಾಸದ ಮನೆ ಖಾಲಿ ಮಾಡುವಂತೆ ಗಂಡನ ಕುಟುಂಬಸ್ಥರು ಹಲ್ಲೆ ಮಾಡಿ ಸಾಮಾನುಗಳನ್ನು ಹೊರ ಹಾಕಿದ್ದಾರೆ. ಈ ವೇಳೆ ಸಹಾಯವಾಣಿ 112ಗೆ ಕರೆ ಮಾಡಿದ್ದಲ್ಲದೇ ಹತ್ತಿರದಲ್ಲಿಯೇ ಇರುವ ಪೊಲೀಸ್ ಠಾಣೆಗೆ ರಕ್ಷಣೆ ಕೋರಿ ದೂರು ನೀಡಲು ಹೋದ ಸಂದರ್ಭದಲ್ಲಿ ಪೊಲೀಸರು ದೂರು ಸ್ವೀಕರಿಸಲು ನಿರಾಕರಿಸಿದ್ದರು. ಭಯದಿಂದ ವಾಸದ ಮನೆ ಬಳಿ ಬಂದ ಮಹಿಳೆ ಮೇಲೆ ಗಂಡನ ಮನೆಯವರು ಹಲ್ಲೆ ಮುಂದುವರಿಸಿ, ಮನೆಯ ಶೀಟ್ ಬಿಚ್ಚಿ, ಸಾಮಾಗ್ರಿ ಹೊರ ಹಾಕಿದರು. ತಡವಾಗಿ ಸ್ಥಳಕ್ಕೆ ಆಗಮಿಸಿದ ಎಎಸ್ಐ ದೇವರಾಜು, ಹಲ್ಲೆಗೆ ಒಳಗಾದ ಮಹಿಳೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿ ನ್ಯಾಯ ಕೊಡಿಸುವ ಬದಲು ದರ್ಪ ಮೆರೆದಿದ್ದಾನೆ.

**ಪ್ರೀತಿಸಿ ಮದುವೆಯಾಗಿದ್ದ ಅರ್ಪಿತಾ**

ಅರ್ಪಿತಾ ಅವರು ಐದು ವರ್ಷಗಳ ಹಿಂದೆ ಶಶಿಕುಮಾರ್ ಎಂಬಾತನನ್ನು ಪ್ರೀತಿಸಿ ಮದುವೆಯಾಗಿದ್ದರು. ಕಳೆದ ಒಂದು ವರ್ಷದಿಂದ ಪತಿ ಮತ್ತು ಮನೆಯವರು ಆಕೆಯನ್ನು ಸರಿಯಾಗಿ ನಡೆಸಿಕೊಳ್ಳುತ್ತಿರಲಿಲ್ಲ ಎನ್ನಲಾಗಿದೆ. ಪತಿ ಮನೆಯಲ್ಲಿ ಇಲ್ಲದ ಸಮಯ ಸಾಧಿಸಿ ಅತ್ತೆ ಭಾಗ್ಯಮ್ಮ, ಅತ್ತಿಗೆ ಗೀತಾ, ನಾದಿನಿ ಜ್ಯೋತಿ ಹಾಗು ಬಾವ ಲೋಕೇಶ್ ಸೇರಿ ಅರ್ಪಿತಾ ವಾಸವಿದ್ದ ಮಹಡಿಯ ಮನೆಗೆ ಬೀಗ ಹಾಕಿ, ಆಕೆಯನ್ನು ಮನೆಯಿಂದ ಹೊರಹಾಕಲು ಯತ್ನಿಸಿದ್ದಾರೆ.ತನ್ನ ಮೇಲೆ ಹಲ್ಲೆ ನಡೆಯುತ್ತಿರುವಾಗ ರಕ್ಷಣೆ ಕೋರಿ ಅರ್ಪಿತಾ 112 ಸಹಾಯವಾಣಿಗೆ ಕರೆ ಮಾಡಿದ್ದರು. ಆದರೆ, ಸಮಯಕ್ಕೆ ಸರಿಯಾಗಿ ವಾಹನ ಬಂದಿಲ್ಲ, ಅನಿವಾರ್ಯವಾಗಿ ಪೊಲೀಸ್ ಠಾಣೆಗೆ ಕರೆ ಮಾಡಿದಾಗ ಸ್ಥಳಕ್ಕೆ ಬಂದ ಎಎಸ್ಐ ದೇವರಾಜ್, ಸಂತ್ರಸ್ತೆಗೆ ಸಾಂತ್ವನ ಹೇಳುವ ಬದಲು ಹಲ್ಲೆ ಮಾಡಿದವರ ಪರವಾಗಿ ನಿಂತಿದ್ದಾರೆ. ಪೊಲೀಸ್ ಅಧಿಕಾರಿಯ ದರ್ಪದ ಮಾತುಗಳು ಮೊಬೈಲ್ ಕ್ಯಾಮರಾದಲ್ಲಿ ಸೆರೆಯಾಗಿದೆ.

**ಆಸ್ಪತ್ರೆಗೆ ದಾಖಲು**

ಗಂಡನ ಮನೆಯವರಿಂದ ಹಲ್ಲೆಗೆ ಒಳಗಾಗಿ ಎದೆ ನೋವು ಹಾಗು ಕೈಗೆ ಆದ ಗಾಯಗಳಿಂದ ಬಳಲುತ್ತಿರುವ ಅರ್ಪಿತಾ ಅವರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರೀತಿಸಿ ಮದುವೆಯಾದ ಪತಿಯೇ ಈಗ ಮನೆಯಿಂದ ಹೊರ ಹಾಕಲು ಯತ್ನಿಸುತ್ತಿದ್ದಾನೆ. ರಕ್ಷಣೆ ನೀಡಬೇಕಾದ ಪೊಲೀಸರೇ ಹಲ್ಲೆಕೋರರ ಜೊತೆ ಸೇರಿ ನನಗೆ ಬೆದರಿಕೆ ಹಾಕುತ್ತಿದ್ದಾರೆಂದು ಅರ್ಪಿತಾ ಅಳಲು ತೋಡಿಕೊಂಡಿದ್ದಾರೆ.

ನ್ಯಾಯ ನೀಡಬೇಕಾದ ಕಾನೂನು ಪಾಲಕರೇ ಈ ರೀತಿ ವರ್ತಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಈ ಕೂಡಲೇ ಉನ್ನತ ಪೊಲೀಸ್ ಅಧಿಕಾರಿಗಳು ಮಧ್ಯ ಪ್ರವೇಶಿಸಿ ಸಂತ್ರಸ್ತೆಗೆ ನ್ಯಾಯ ಒದಗಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಹಲ್ಲೆ ಗೊಳಗಾದ ಅರ್ಪಿತಾ ಮೇಲೆ ಹಲ್ಲೆ ಮಾಡಿದವರ ವಿರುದ್ಧ ಪ್ರಕರಣ ದಾಖಲಾಗಿದೆ.

# ರಂಗಭೂಮಿಯಲ್ಲಿ ಮಹಿಳೆಯ ಸಂಗೀತ ಸೃಜನಶೀಲತೆ

### 60ಕ್ಕೂ ಹೆಚ್ಚು ನಾಟಕಗಳಿಗೆ ಸಂಗೀತ ನೀಡಿದ ಸವಿತಾ | ಕಲೆ ಉಳಿಸುವ ಮಹಾದಾಸೆ

ಶ್ರೀನಿವಾಸ್ ಆರ್. ಉಳ್ಳಾವಳ್ಳಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ :** ರಂಗಭೂಮಿಯಲ್ಲಿ ಮಹಿಳೆಯರ ಪಾತ್ರ ಕಡಿಮೆ ಎಂಬ ಅಪವಾದವನ್ನು ಅಲ್ಲಗಳೆದಿರುವ ಮಹಿಳೆಯೊಬ್ಬರು ಸಂಗೀತ ನಿರ್ದೇಶನದ ಮೂಲಕ ತಾವು ಪುರುಷರಿಗಿಂತ ಕಡಿಮೆ ಇಲ್ಲವೆಂಬುದನ್ನು ಸಾಬೀತುಪಡಿಸಿದ್ದಾರೆ.

ತಾಲ್ಲೂಕಿನ ನೇರಲಕೆರೆ ಗ್ರಾಮದ ಸವಿತಾ ಕುಮಾರ್ ಅವರು ಪೌರಾಣಿಕ ನಾಟಕದ ಸಂಗೀತ ನಿರ್ದೇಶಕಿಯಾಗಿ ಮನೆ ಮಾತಾಗಿದ್ದಾರೆ. ಅವರ ಕಲಾ ಸೇವೆಗೆ ಬೆಳ್ಳಿ ಕಿರೀಟ ದೊರೆತಿದೆ. ಮಹಿಳೆ ಎಂದರೆ ಅಡುಗೆ ಮನೆಗೆ ಮಾತ್ರ ಸೀಮಿತವೆಂಬ ಅಪವಾದದಿಂದ ದೂರವಾಗಿರುವ ಅವರು ವಿಶಿಷ್ಟ ಸಾಧಕರೆನಿಸಿಕೊಂಡಿದ್ದಾರೆ.



ಇತ್ತೀಚಿನ ದಿನಗಳಲ್ಲಿ ಪೌರಾಣಿಕ ನಾಟಕ, ಯಕ್ಷಗಾನ, ಕೋಲಾಟ ಸೇರಿ ರಂಗಭೂಮಿ ಕಲೆ ಅಳಿವಿನಂಚಿಗೆ ತಲುಪುತ್ತಿದೆ. ಗ್ರಾಮೀಣ ಭಾಗದ ಅಲ್ಲಲ್ಲಿ ಹಬ್ಬ ಹರಿದಿನಗಳಲ್ಲಿ ಪೌರಾಣಿಕ ನಾಟಕ ಪ್ರದರ್ಶನ ಕಾಣುತ್ತವೆ. ರಾತ್ರಿ ಸಮಯದ ಕೆಲಸ, ಅಪಾರ ಶ್ರಮ ಹಾಗು ಆರೋಗ್ಯವನ್ನು ನಾಟಕ ಪ್ರದರ್ಶನಕ್ಕೆ ಮೀಸಲಿಡಬೇಕಾದ್ದರಿಂದ ಪುರುಷರಷ್ಟೇ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಆದರೆ, ಸವಿತಾ ಕುಮಾರ್ ಅವರು ತಾವು ಯಾರಿಗೂ ಕಡಿಮೆ ಇಲ್ಲವೆಂದು ತೋರಿಸಿಕೊಟ್ಟಿದ್ದಾರೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿಯಾಗಿದ್ದು, ಸಂಘ ಹಾಗು ಮನೆಯ ಜವಾಬ್ದಾರಿಯ ಜೊತೆಗೆ ಕಲೆಯಲ್ಲಿಯೂ ಸೈ ಎನಿಸಿ ಕೊಂಡಿದ್ದಾರೆ.

ಶೈಕ್ಷಣಿಕ ಜೀವನದಲ್ಲಿ ಶಾಲಾ ಕಾರ್ಯಕ್ರಮದ ವೇಳೆ ಸಾಕಷ್ಟು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದ ಅವರು ವೈವಾಹಿಕ ಜೀವನದ ನಂತರವೂ ಇಷ್ಟದ ಕಲೆಯತ್ತ ಆಕರ್ಷಿತರಾಗಿ ಮುಂದುವರಿದಿದ್ದಾರೆ. ಪೌರಾಣಿಕ ನಾಟಕಗಳಲ್ಲಿ ಪಾತ್ರಧಾರಿಯಾಗಿ ಕಾಣಿಸಿ ಕೊಳ್ಳುತ್ತಿದ್ದರು. ನಂತರ ಪೌರಾಣಿಕ ನಾಟಕಗಳನ್ನು ಕಲಿಸುವ ಹಾಗು ಪ್ರದರ್ಶನ ನೀಡುವ ಆಸಕ್ತಿ ಹೊಂದಿದ ಅವರು ಕಳೆದ 15 ವರ್ಷಗಳಿಂದ ಸ್ವತಃ ಸಂಗೀತ ನಿರ್ದೇಶಕರಾಗಿ ತೆರೆ ಹಿಂದೆ ಕೆಲಸ ಮಾಡಲು ಶುರು ಮಾಡಿದರು.

ಕುರುಕ್ಷೇತ್ರ, ಅಥವಾ ಧರ್ಮರಾಜ್ಯ ಸ್ಥಾಪನೆ, ರಾಜ ಸತ್ಯವ್ರತ ಅಥವಾ ಶನಿ ಪ್ರಭಾವ ಹಾಗು ದೇವಿ ಮಹಿಮೆ ಎಂಬ ನಾಟಕ ಕಲಿಸುತ್ತಾರೆ. ಸುಮಾರು 60ಕ್ಕೂ ಹೆಚ್ಚು ಪೌರಾಣಿಕ ನಾಟಕ ಪ್ರದರ್ಶನ ನೀಡಿರುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇತ್ತೀಚೆಗೆ ಚನ್ನರಾಯಪಟ್ಟಣದಲ್ಲಿ ಮಹಿಳೆಯರ ತಂಡವೊಂದಕ್ಕೆ ಕುರುಕ್ಷೇತ್ರ ಅಥವಾ ಧರ್ಮ ರಾಜ್ಯ ಸ್ಥಾಪನೆ ಎಂಬ ಪೌರಾಣಿಕ ನಾಟಕ ಕಲಿಸಿ ಪ್ರದರ್ಶನ ನೀಡಿ ನಿರೀಕ್ಷೆಗೆ ಮೀರಿದ ಯಶಸ್ಸು ಕಂಡಿದ್ದಾರೆ.

ಸಂಗೀತ ನಾಟಕದ ಅವಿಭಾಜ್ಯ ಅಂಗ. ನಾಟಕದ ಭಾವನೆ, ಕಥಾ ಹಂದರ ಮತ್ತು ಪಾತ್ರಗಳ ಮನಸ್ಥಿತಿಯನ್ನು ಪ್ರೇಕ್ಷಕರಿಗೆ ತಲುಪಿಸುವಲ್ಲಿ ಅಂಗೀತದ ಪಾತ್ರ ಅಪಾರ. ಸಂಗೀತ ಸಂಯೋಜನೆ, ವಾದ್ಯ ನಿರ್ವಹಣೆ ಮತ್ತು ತಂಡವನನು ಮುನ್ನಡೆಸುವುದು ಸವಾಲಿನ ಕೆಲಸವಾದರೂ ಸವಿತಾ ಅದನ್ನು ಅಚ್ಚುಕಟ್ಟಾಗಿ ನಿಬಾಯಿಸುವ ಮೂಲಕ ಜನಮನ ಗೆದ್ದಿದ್ದಾರೆ.

### ಇಂದು ನಾಟಕ ಪ್ರದರ್ಶನ

ನೇರಲಕೆರೆ ಗ್ರಾಮದಲ್ಲಿ ಫೆ.9 ರಂದು ಸೋಮವಾರ ರಾತ್ರಿ ಕುರುಕ್ಷೇತ್ರ ಅಥವಾ ಧರ್ಮ ರಾಜ್ಯ ಸ್ಥಾಪನೆ ಎಂಬ ಪೌರಾಣಿಕ ನಾಟಕ ಪ್ರದರ್ಶನಗೊಳ್ಳಲಿದೆ. ಇನ್ನು ಉಳ್ಳಾವಳ್ಳಿ ಗ್ರಾಮದಲ್ಲಿ ಮಾ.15 ರಂದು ಕುರುಕ್ಷೇತ್ರ ನಾಟಕ ಪ್ರದರ್ಶನಗೊಳ್ಳಲಿದೆ ಎಂದು ಸವಿತಾ ಅವರು ತಿಳಿಸಿದ್ದಾರೆ.

ಇವರ ಸಹಾಯಕ್ಕೆ ಪತಿ ಕುಮಾರ್ ಅವರು ಸದಾ ಹಿಂದಿ ನಿಂತಿರುವುದು ವಿಶೇಷ. ಕಲಿಕೆಯೇ ನನ್ನ ಜೀವನ, ನನ್ನ ದುಡಿಮೆ. ಏನೇ ಇರಲಿ, ಕಲೆಯನ್ನು ಉಳಿಸಿ, ಬೆಳೆಸುವಲ್ಲಿ ಶ್ರಮಿಸುತ್ತೇನೆ. ನಾನು ದುಡಿಮೆಯ ಆಸೆಯಿಂದ ಈ ಕ್ಷೇತ್ರಕ್ಕೆ ಬಂದವಳಲ್ಲ, ಗ್ರಾಮೀಣ ಸೊಗಡು, ಕಲೆ ಉಳಿಯ ಬೇಕು. ಮುಂದಿನ ಪೀಳಿಗೆಗೂ ಬೀಜವಾಗಿ ಬಿತ್ತಬೇಕೆಂಬುದು ಮಹಾದಾಸೆ ಎನ್ನುತ್ತಾರೆ ಸವಿತಾ ಕುಮಾರ್.

## ಹೆಬ್ಬಾಳು ಗ್ರಾಮದಲ್ಲಿ ಅಂಬೇಡ್ಕರ್ ಭವನಕ್ಕೆ ಭೂಮಿ ಪೂಜೆ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಹೆಬ್ಬಾಳು ಗ್ರಾಮದಲ್ಲಿ ಸಂಸದರ ಸ್ಥಳೀಯ ಕ್ಷೇತ್ರಾಭಿವೃದ್ಧಿ ಅನುದಾನದಡಿ ನಿರ್ಮಿಸುತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ಭವನದ ಕಟ್ಟಡ ಕಾಮಗಾರಿಗೆ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ದೇಶಾಣಿ ಆನಂದ್ ಭಾನುವಾರ ಭೂಮಿಪೂಜೆ ನೆರವೇರಿಸಿದರು.



ಈ ವೇಳೆ ಮಾತನಾಡಿದ ಅವರು, ಗ್ರಾಮಸ್ಥರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಹೆಬ್ಬಾಳು ಗ್ರಾಮದಲ್ಲಿ ಜನರ ಆಶಯದಂತೆ ಡಾ. ಬಿ.ಆರ್. ಅಂಬೇಡ್ಕರ್ ಭವನಕ್ಕೆ ಸಂಸದ ಶ್ರೇಯಸ್ ಪಟೇಲ್ ಅವರು ಮೊದಲ ಹಂತವಾಗಿ 3 ಲಕ್ಷ ರೂ. ಅನುದಾನ ನೀಡಿದ್ದಾರೆ. ಈ ಹಣ ಅಡಿಪಾಯ ಹಾಕಲು ಮೀಸಲಿದ್ದು ಕೆಲಸ ಮುಗಿದ ನಂತರ ಹಂತ ಹಂತವಾಗಿ ಕಟ್ಟಡ ನಿರ್ಮಾಣಕ್ಕೂ ಸಂಸದರು ಅನುದಾನ ಕೊಡುವುದಾಗಿ ಭರವಸೆ ನೀಡಿದ್ದಾರೆಂದರು.

ಕುರುಬರ ಸಂಘದ ಜಿಲ್ಲಾ ನಿರ್ದೇಶಕ ಬಿ.ಎಂ.ಸಂತೋಷ್ ಅವರು ಮಾತನಾಡಿ, ಚುನಾವಣೆ ಸಂದರ್ಭದಲ್ಲಿ ಭರವಸೆ ನೀಡಿದಂತೆ ಸಂಸದರು ಹೆಬ್ಬಾಳು ಗ್ರಾಮದಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಅನುದಾನ ಕೊಟ್ಟಿದ್ದಾರೆ. ಕಾಂಗ್ರೆಸ್ ಸರ್ಕಾರ ಬಡವರ ಮತ್ತು ದೀನ ದಲಿತರ ಪರವಾಗಿ ಕೆಲಸ ಮಾಡುತ್ತಿದ್ದು ಬಜೆಟ್‌ನಲ್ಲಿ ಜಿಲ್ಲೆಗೆ ಹೆಚ್ಚಿನ ಅನುಕೂಲವಾಗುವ ನಿರೀಕ್ಷೆ ಇದೆ ಎಂದರು. ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಗೋಪಾಲ್, ಅಂಬೇಡ್ಕರ್ ಯುವಕರ ಸಂಘದ ಅಧ್ಯಕ್ಷ ಸುರೇಶ್, ಮಾಜಿ ಅಧ್ಯಕ್ಷ ಲಕ್ಷ್ಮಣ್ ಇತರರಿದ್ದರು.

## ಚಗಚಗೆರೆಯಲ್ಲಿ ಶನೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ

• ಪ್ರಜೋದಯ ವರದಿ

**ಗಂಡಸಿ:** ಹೋಬಳಿಯ ಚಗಚಗೆರೆ ಗ್ರಾಮದ ಶ್ರೀ ಉದ್ಭವ ಶನೇಶ್ವರ ಸ್ವಾಮಿ ದೇವಸ್ಥಾನದ ವಾರ್ಷಿಕೋತ್ಸವ ಹಾಗು 42ನೇ ವರ್ಷದ ಜಾತ್ರಾ ಮಹೋತ್ಸವ ಭಾನುವಾರ ಅದ್ಧೂರಿಯಾಗಿ ಜರುಗಿತು.



ಭಾನುವಾರ ಬೆಳಿಗ್ಗೆ 8 ಗಂಟೆಗೆ ವಿಧಿ ವಿಧಾನಗಳೊಂದಿಗೆ ಗಂಗಾ ಮಾತೆಗೆ ಬಾಗಿನ ಸಮರ್ಪಣೆ ಮಾಡಿ ಪ್ರಾರ್ಥನೆ ಸಲ್ಲಿಸಿದ ನಂತರ 108 ಅಗ್ರೋ್ಧಕ ಕಳಸ ಹೊತ್ತ ಸುಮಂಗಲಿಯರು ಶ್ರೀ ಶನೇಶ್ವರಸ್ವಾಮಿ, ಆದಿಶಕ್ತಿ ಮಳೆಯಮ್ಮ ದೇವಿ, ಶ್ರೀ ವಿದ್ಯಾ ಚೌಡೇಶ್ವರಿ ಅಮ್ಮ, ಹಂಗರಹಳ್ಳಿ ಬಸವಣ್ಣ ದೇವರನ್ನು ಕರಡೆ ವಾದ್ಯ, ನಾದಸ್ವರ, ಗುಂಡಿನ ಸುರಿಮಳೆ ಯೊಂದಿಗೆ ಗ್ರಾಮದ ರಾಜಬೀದಿ ಗಳಲ್ಲಿ ಮೆರವಣಿಗೆಯೊಂದಿಗೆ ಶ್ರೀ ಸ್ವಾಮಿಯವರ ಮೂಲಸ್ಥಾನಕ್ಕೆ ಬರ ಮಾಡಿಕೊಳ್ಳಲಾಯಿತು. ಶ್ರೀ ಸ್ವಾಮಿಯವರ ಮೂಲಸ್ಥಾನ ದಲ್ಲಿ ಸ್ವಾಮಿಯವರಿಗೆ ರುದ್ರಾಭಿ ಷೇಕ, ಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ದುರ್ಗಾ ಹೋಮ ಗಾಯತ್ರಿ, ಹೋಮ ನಂತರ ಕುಂಭಾಭಿಷೇಕ, ಮಹಾಪೂರ್ಣಾಹುತಿ, ಮಹಾ ನೈವೇದ್ಯ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಮಾಡ ಲಾಯಿತು. ಶ್ರೀ ಸ್ವಾಮಿಗೆ ರಜತ ಕಿರೀಟ ಧಾರಣೆ ಮಾಡಲಾಯಿತು. ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ್ದ ಭಕ್ತಾದಿಗಳಿಗೆ ದೇವಾಲಯದ ಬಳಿ ಅನ್ನದಾಸೋಹ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

## ಬೈಕ್‌ನಲ್ಲಿಟ್ಟಿದ್ದ ಚಿನ್ನಾಭರಣ ಕಳವು

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಬೈಕ್‌ನ ಮುಂಭಾಗದ ಬ್ಯಾಗ್‌ನಲ್ಲಿಟ್ಟಿದ್ದ 5 ಲ.ರೂ. ಬೆಲೆಯ ಚಿನ್ನಾಭರಣ ಕಳವಾಗಿರುವ ಘಟನೆ ತಾಲ್ಲೂಕಿನ ರೇಚಿಹಳ್ಳಿಯಲ್ಲಿ ನಡೆದಿದೆ.

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ನೊಣವಿನಕೆರೆ ಹೋಬಳಿ ಹುಣಸೆಘಟ್ಟ ಗ್ರಾಮದ ಕೌಶಿಕ್ ಅವರ ಪತ್ನಿ ನಾಗಶ್ರೀ ಅವರ ಚಿನ್ನಾ ಭರಣ ಕಳವಾಗಿದೆ. ಇಬ್ಬರು ಪ್ರೀತಿಸಿ ಜ.16 ರಂದು ವಿವಾಹವಾಗಿದ್ದರು. ಪೋಷಕರು ವಿರೋಧಿಸಿದ್ದರಿಂದ ಮದುವೆಯಾದ ದಿನ ಬಾಗೂರು ಹೋಬಳಿ ರೇಚಿಹಳ್ಳಿ ಗ್ರಾಮದ ಸ್ನೇಹಿತರ ಮನೆಯಲ್ಲಿ ಇದ್ದರು. ಮಾರನೇ ದಿನ ಹುಣಸೆಘಟ್ಟಕ್ಕೆ ಹೋಗಿ ವಾಪಾಸ್ಸಾಗಿದ್ದರು. ಆದರೆ, ನಾಗಶ್ರೀ ಅವರ ತಮ್ಮ ಮೈಮೇಲಿನ ಒಡವೆಗಳನ್ನು ಬೈಕ್ ಮುಂಭಾಗದ ಬ್ಯಾಗ್‌ನಲ್ಲಿಟ್ಟಿದ್ದರು. ಮನೆಯೊಳಗೆ ಹೋಗುವಾಗ ಆ ವಿಚಾರವನ್ನು ಮರೆತಿದ್ದು, ಬೆಳಿಗ್ಗೆ ಎದ್ದು ನೋಡಿದಾಗ ಚಿನ್ನಾಭರಣವಿದ್ದ ಬ್ಯಾಗ್ ನಾಪತ್ತೆಯಾಗಿದೆ.

### ಮಾರುಕಟ್ಟೆಯಲ್ಲಿ ಹೆಚ್ಚಿದ ಬೇಡಿಕೆ | ಪಾಲಿಶ್ ದರವೂ ದುಬಾರಿ

# ಬೆಲೆ ಏರಿಕೆ-ಕಳ್ಳತನ ಭೀತಿ : ನಕಲಿ ಆಭರಣದತ್ತ ಜನರ ಚಿತ್ತ

• ಪ್ರಜೋದಯ ವರದಿ

**ಹಾಸನ:** ಇತ್ತೀಚಿನ ದಿನಗಳಲ್ಲಿ ಚಿನ್ನಾಭರಣಗಳ ಬೆಲೆ ನಿರಂತರ ಏರಿಕೆ ಹಾಗು ಸಾರ್ವಜನಿಕ ಸ್ಥಳಗಳಲ್ಲಿ ಕಳ್ಳಕಾರರ ಹಾವಳಿ ಹೆಚ್ಚಾಗಿರುವುದರಿಂದ ಸಾರ್ವಜನಿಕರು ಕಡಿಮೆ ಬೆಲೆಗೆ ಸಿಗುವ ನಕಲಿ ಚಿನ್ನಾಭರಣಗಳತ್ತ ಚಿತ್ತ ಹರಿಸಿದ್ದಾರೆ.


ಮೊದಲೆಲ್ಲಾ ಚಿನ್ನಾಭರಣ ಖರೀದಿಗಾಗಿ ಜ್ಯುವೆಲ್ಲರಿ ಶಾಪ್‌ಗಳಲ್ಲಿ ಕಾಣಿಸುತ್ತಿದ್ದ ಜನರು ಪಾಲಿಶ್ ಮಾಡಿದ ಆಭರಣಗಳ ಖರೀದಿಯಲ್ಲಿ ಹೆಚ್ಚಾಗಿ ಕಾಣಿಸುತ್ತಿದ್ದಾರೆ. ಬೆಲೆ ಏರಿಕೆಯ ಪರಿಣಾಮವಾಗಿ ಚಿನ್ನದ ವ್ಯಾಪಾರಿಗಳು ಸಹ ಅದೇ ಉಪಾಯವನ್ನು ಜನರಿಗೆ ಹೇಳುತ್ತಿದ್ದಾರೆ.

ಚಿನ್ನದ ಬೆಲೆ ಏರಿಕೆ ಒಂದು ಆರ್ಥಿಕ ವಿಷಯ ಮಾತ್ರವಲ್ಲ, ಸಾಮಾಜಿಕ ಚರ್ಚೆಯ ವಿಷಯವೂ ಆಗಿದೆ. ಜೊತೆಗೆ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಚಿನ್ನಾಭರಣ ಕಳ್ಳತನ ಪ್ರಕರಣಗಳು ಜನರಲ್ಲಿ ಆತಂಕ ಸೃಷ್ಟಿಸಿವೆ. ಸಾರಿಗೆ ಬಸ್, ಜಾತ್ರೆಗಳಲ್ಲಿ ಚಿನ್ನಾಭರಣ ಕಳ್ಳರ ಸಂಖ್ಯೆ ಹೆಚ್ಚುತ್ತಲೇ ಇದೆ. ಚನ್ನರಾಯಪಟ್ಟಣ, ಹಾಸನ, ಬೇಲೂರು, ಅರಸೀಕೆರೆ ಬಸ್ ನಿಲ್ದಾಣಗಳಲ್ಲಿ ಬಸ್ ಹತ್ತುವಾಗ ಅಥವಾ ಇಳಿಯುವಾಗ ನೂಕಾಟದಲ್ಲಿ ಯಾರಿಗೂ ಗೊತ್ತಾಗದಂತೆ ಮಹಿಳೆಯರ ಕೊರಳಿಗೆ ಕೈ ಹಾಕಿ ಕಳ್ಳತನ ಮಾಡುವ ಪ್ರಕರಣಗಳು ನಿತ್ಯ ವರದಿಯಾಗುತ್ತಲೇ ಇವೆ.

ಚಿನ್ನದ ಬೆಲೆ ಗಗನಕ್ಕೇರಿರುವುದರಿಂದ ಮಹಿಳೆಯರು ನಕಲಿ ಆಭರಣಗಳೇ ಸೂಕ್ತವೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಅಸಲಿ ಚಿನ್ನಾಭರಣವನ್ನು ಮನೆಯಲ್ಲಿಟ್ಟು ನಕಲಿಯನ್ನೇ ಧರಿಸುತ್ತಿದ್ದಾರೆ. ಓಲೆ, ಜುಮುಕಿ ಮಾತ್ರವಲ್ಲದೆ ತಾಳಿ ಸರವನ್ನು ಹಾಕುತ್ತಿದ್ದಾರೆ. ಜ್ಯುವೆಲ್ಲರಿ ಶಾಪ್‌ಗಳಲ್ಲಿ 800 ರಿಂದ 1 ಸಾವಿರ ರೂ.ಗೆ ಕರಿಮಣಿ ಸರದ ತಾಳಿ ಸಿಗುತ್ತಿದೆ. ಥೇಟ್ ಚಿನ್ನದ ಸರದಂತೆಯೇ ಕಾಣಿಸುತ್ತಿರುವುದರಿಂದ ಜಾತ್ರೆ, ಸಭೆ ಸಮಾರಂಭಗಳಲ್ಲಿ ಅವುಗಳನ್ನು ಧರಿಸುವ ಪರಿಪಾಠ ಬೆಳೆದಿದೆ.

ಖರೀದಿ ಪ್ರಕ್ರಿಯೆ ಮುಂದೂಡಿಕೆ:

ಸದ್ಯ ಚಿನ್ನ ಹಾಗು ಬೆಳ್ಳಿ ಆಭರಣ ದರ ಏರಿಕೆಯಾಗುತ್ತಿರುವುದರಿಂದ ಹಲವರು ಖರೀದಿಸುವುದನ್ನು ಮುಂದೂಡುತ್ತಿದ್ದಾರೆ. ಕೆಲವರು ಹಳೆಯ ಚಿನ್ನವನ್ನು ಮರುವಿನ್ಯಾಸಗೊಳಿಸುವತ್ತ ಗಮನ ಹರಿಸುತ್ತಿದ್ದರೆ, ಇನ್ನೂ ಕೆಲವರು ನಕಲಿ ಆಭರಣಗಳನ್ನು ದೈನಂದಿನ ಬಳಕೆಗೆ ಆಯ್ಕೆ ಮಾಡುತ್ತಿದ್ದಾರೆ. ಜ್ಯುವೆಲ್ಲರಿ ಮಾಲೀಕರೇ ಒಂದು ತಿಂಗಳ ಬಳಿಕ ದರ ಕಡಿಮೆಯಾಗಬಹುದು. ಈಗ ಖರೀದಿಸಬೇಡಿ ಎನ್ನುತ್ತಿದ್ದಾರೆ.



**ನಕಲಿಗೆ ಹೆಚ್ಚುತ್ತಿರುವ ಬೇಡಿಕೆ**

ಮಾರುಕಟ್ಟೆಯಲ್ಲಿ ಈಗ ನಕಲಿ ಚಿನ್ನದ ಆಭರಣಗಳ ವಿವಿಧ ವಿನ್ಯಾಸಗಳು ಲಭ್ಯವಿವೆ. ಇವುಗಳು ಮೂಲ ಚಿನ್ನದಂತೆ ಕಾಣುವ ರೀತಿಯಲ್ಲಿ ತಯಾರಾಗಿರುವುದರಿಂದ ಸಾಮಾನ್ಯವಾಗಿ ಗುರುತಿಸುವುದು ಕಷ್ಟ. ಕಡಿಮೆ ಬೆಲೆಯಲ್ಲಿ ಲಭ್ಯವಾಗುವ ಈ ಆಭರಣಗಳು ಫ್ಯಾಷನ್‌ಗೂ ಹೊಂದಿಕೆಯಾಗುತ್ತವೆ. ಯುವ ಜನತೆ ಮಾತ್ರವಲ್ಲ, ಮಧ್ಯ ವಯಸ್ಕರು ಮತ್ತು ಹಿರಿಯರೂ ಸಹ ದೈನಂದಿನ ಬಳಕೆಗೆ ಅವುಗಳನ್ನು ಬಳಸುತ್ತಿದ್ದಾರೆ. ಈ ಹೊಸ ಪ್ರವೃತ್ತಿ ಸಾಮಾಜಿಕ ಮನೋಭಾವದಲ್ಲಿಯೂ ಬದಲಾವಣೆ ತರುತ್ತಿದೆ. ಹಿಂದೆ ಚಿನ್ನಾಭರಣವನ್ನು ಪ್ರತಿಷ್ಠೆಯ ಸಂಕೇತವೆಂದು ಪರಿಗಣಿಸಲಾಗುತ್ತಿತ್ತು. ಆದರೆ, ಈಗ ಭದ್ರತೆ ಮತ್ತು ವ್ಯವಹಾರಿಕತೆ ಪ್ರಾಮುಖ್ಯತೆ ಪಡೆಯುತ್ತಿದೆ. ಆರ್ಥಿಕ ದೃಷ್ಟಿಯಿಂದಲೂ ಇದು ಮಹತ್ವದ್ದಾಗಿದೆ. ನಕಲಿ ಆಭರಣ ಉದ್ಯಮಕ್ಕೆ ಅದರಿಂದ ಉತ್ತೇಜನ ಸಿಕ್ಕಿದ್ದು, ಸಣ್ಣ ವ್ಯಾಪಾರಿಗಳಿಗೆ ಹೊಸ ಅವಕಾಶಗಳು ದೊರಕಿವೆ. ಬೆಳ್ಳಿ ಪದಾರ್ಥಗಳಿಗೆ ಚಿನ್ನದ ಪಾಲಿಶ್ ಸಹ ಮಾಡಿಕೊಡಲಾಗುತ್ತಿದೆ. ಮೊದಲೆಲ್ಲಾ ಒಂದು ಸರಕ್ಕೆ 300 ರಿಂದ 400 ರೂ. ಪಡೆದು ಪಾಲಿಶ್ ಮಾಡುತ್ತಿದ್ದರು. ಈಗ ಚಿನ್ನದ ದರ ಹೆಚ್ಚಿರುವುದರಿಂದ 2 ಸಾವಿರ ರೂ. ವರೆಗೆ ಪಡೆಯಲಾಗುತ್ತಿದೆ. ಬೆಲೆ ಏರಿಕೆಯಿಂದ ಚಿನ್ನ ಮಾತ್ರವಲ್ಲ ಬೆಳ್ಳಿ ಆಭರಣ ಮಾಡಿಸುವವರ ಸಂಖ್ಯೆಯೂ ಕಡಿಮೆಯಾಗಿದೆ. ಬೆಳ್ಳಿ ಗ್ಲಾಸ್, ತಟ್ಟೆ, ಚಮಚ ಮಾಡಿಸುವವರ ಸಂಖ್ಯೆಯೂ ಕುಸಿದಿದೆ ಎನ್ನುತ್ತಾರೆ ಹಾಸನದ ದೊಡ್ಡಗರಡಿ ಬೀದಿಯಲ್ಲಿರುವ ಅಕ್ಕಸಾಲಿಗರು.

700 ರೂ.ಗೆ ಸಿದ್ಧವಾಗುತ್ತಿದ್ದ ಕಾಲುಂಗುರದ ಬೆಲೆ ಈಗ 3500 ರೂ.ಗೆ ಏರಿಕೆಯಾಗಿದೆ. ಅದೇ ರೀತಿ 3 ಸಾವಿರ ರೂ. ಇದ್ದ ಕಾಲು ಚೈನಿನ ಬೆಲೆ 12 ಸಾವಿರ ರೂ.ಗೆ ಜಿಗಿದಿದೆ. ಹೀಗೆ ಆಭರಣದ ಬೆಲೆ ಮೂರು ನಾಲ್ಕು ಪಟ್ಟು ಹೆಚ್ಚಾಗಿದ್ದು, ಕೊಳ್ಳುವವರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಹೀಗೆ ಲಕ್ಷಾಂತರ ರೂ. ಖರ್ಚು ಮಾಡಿ ಖರೀದಿಸಿದ ಆಭರಣ ಕಿಡಿಗೇಡಿಗಳ ಪಾಲಾಗಬಾರದೆಂದು ನಕಲಿಯತ್ತ ಗಮನ ಹೆಚ್ಚಿದೆ.

## ಸಾಲಬಾಧೆ: ವ್ಯಕ್ತಿ ಆತ್ಮಹತ್ಯೆ

• ಪ್ರಜೋದಯ ವರದಿ

ಬೇಲೂರು: ಜಮೀನು ಮಾರಾಟ ಮಾಡಿದರೂ ಸಾಲ ತೀರದ ಹಿನ್ನಲೆಯಲ್ಲಿ ತಾಲ್ಲೂಕಿನ ಕಟ್ಟೆಸೋಮನಹಳ್ಳಿ ಗ್ರಾಮದ ಕೆ.ಜೆ.ರಮೇಶ್ ನೇಣಿಗೆ ಶರಣಾಗಿದ್ದಾರೆ.

ರಮೇಶ್ ಕೃಷಿಗಾಗಿ ಬ್ಯಾಂಕ್‌ನಲ್ಲಿ 6 ಲಕ್ಷ ರೂ., 20 ಲಕ್ಷ ರೂ. ಕೈ ಸಾಲ ಮಾಡಿಕೊಂಡಿದ್ದರು. ಭಾನುವಾರ ಬೆಳಿಗ್ಗೆ ತಮ್ಮ ಜಮೀನು ಪಕ್ಕದ ತೇಗದ ಮರಕ್ಕೆ ನೇಣು ಹಾಕಿಕೊಂಡಿದ್ದಾರೆ.

10 ವರ್ಷಗಳ ಹಿಂದೆ ಗೋಣಿಸೋಮನಹಳ್ಳಿ ಕೆನರಾ ಬ್ಯಾಂಕ್‌ನಲ್ಲಿ ಹೆಂಡತಿ ಹೆಸರಿನಲ್ಲಿ 2 ಲ.ರೂ.,ತಮ್ಮ ಹೆಸರಿನಲ್ಲಿ 4 ಲ.ರೂ. ಸಾಲ ಪಡೆದಿದ್ದರು. ಬ್ಯಾಂಕ್‌ನವರು ಮನೆ ಜಪ್ತಿಗೆ ಬಂದಿದ್ದರಿಂದ ತಮ್ಮ ಪಾಲಿನ ಜಮೀನನ್ನು 8 ಲಕ್ಷ ರೂ.ಗೆ ಮಾರಾಟ ಮಾಡಿ ಬ್ಯಾಂಕ್ ಹಾಗು ಸ್ವಲ್ಪ ಕೈ ಸಾಲ ತೀರಿಸಿದ್ದರು. ಹಳೇಬೀಡು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ ಚಿನ್ನಾಭರಣ ಗಿರವಿ ಇಟ್ಟಿದ್ದರು. ಬೆಳೆ ಕೈ ಕೊಟ್ಟ ಹಿನ್ನಲೆಯಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

CMYK CMYK CMYK CMYK

E-mail : prajodayahsn@gmail.com





# ಫೆಬ್ರವರಿ: ಕಿರಿಯ ತಿಂಗಳ ಹಿರಿಮೆಯ ಕುರಿತೊಂದು ಲಹರಿ


**» ನಾಲ್ಕು ವರ್ಷಗಳಿಗೊಮ್ಮೆ ಫೆಬ್ರವರಿಯಲ್ಲಿ 29 ದಿನಗಳಿರುತ್ತವೆ, ಅದನ್ನು ಅಧಿಕವರ್ಷ ಎನ್ನುತ್ತೇವೆ, ಭೂಮಿಯು ಸೂರ್ಯನ ಸುತ್ತ ಸುತ್ತಲಿಕ್ಕೆ 365 ದಿನಗಳಿಗಿಂತ ತುಸು ಹೆಚ್ಚು ಸಮಯ ಬೇಕಾಗುವುದು, ನಾಲ್ಕು ವರ್ಷಗಳಲ್ಲಿ ಆ ಸಮಯವು ಒಂದು ದಿನದಷ್ಟಾಗುವುದು, ಅದೇ ಅಧಿಕ ದಿನ ಫೆಬ್ರವರಿಯ 29ನೆಯ ತಾರೀಕು. ಇಸವಿಯು ನಾಲ್ಕರಿಂದ ನಿಶ್ಶೇಷ ಭಾಗವಾದರೆ ಆ ಇಸವಿ ಅಧಿಕ ವರ್ಷ.**

ತ್ರಿಳಿರು ತೋರಣ

ಅಧಿಕ ವರ್ಷದಲ್ಲಿ 29, ಉಳಿದಂತೆ 28 ದಿನಗಳಿರುವ ತಿಂಗಳು ಎನ್ನುವುದು ಫೆಬ್ರವರಿಯ ಹೆಗ್ಗಳಿಕೆ. ಮಿಕ್ಕ ತಿಂಗಳುಗಳಿಗಿಂತ ಕಡಿಮೆ ದಿನಗಳೆಂದ ಮೇಲೆ ಹೆಗ್ಗಳಿಕೆಯೇನು ಬಂತು? ಅದು ಹಾಗಲ್ಲ. ತಿಂಗಳ ಸಂಬಳ, ನಿವೃತ್ತಿವೇತನ, ಮಾಸಾಶನ ಪಡೆಯುವವರಿಗೆಲ್ಲ ಫೆಬ್ರವರಿಯಲ್ಲಿ ಕಡಿಮೆ ದಿನಗಳಲ್ಲಿ ಹೆಚ್ಚು ಗಳಿಕೆ ತಾನೆ? ಅದನ್ನೇ ಫೆಬ್ರವರಿಯ ಹೆಗ್ಗಳಿಕೆ ಎಂದಿದ್ದು.

ಮತ್ತೊಂದೆಡೆ, ಫೆಬ್ರವರಿಯಲ್ಲೂ 30 ದಿನ ಎಂದು ತೋರಿಸುವವರಿದ್ದಾರೆ- ಮೊನ್ನೆ ಕಾಂಗ್ರೆಸ್ ಪಕ್ಷದ ವತಿಯಿಂದ ಮನರೇಗಾ ಬಚಾವ್ ಸಂಗ್ರಾಮ ಫೆಬ್ರವರಿ 30ಕ್ಕೆ ಅಂತೊಂದು ಫ್ಲೆಕ್ಸ್‌ನ ಚಿತ್ರ ಭಾರಿ ವೈರಲ್ ಆಗಿತ್ತಲ್ಲ!? ಹಿಂದೊಮ್ಮೆ 2018ರಲ್ಲಿ ಇಂಡಸ್‌ಇಂಡ್ ಬ್ಯಾಂಕ್‌ನವರು ಮುದ್ರಿಸಿ ವಿತರಿಸಿದ ದಿನದರ್ಶಿಕೆಯಲ್ಲಿ ಫೆಬ್ರವರಿಯಲ್ಲಿ 31 ದಿನಗಳಿದ್ದುವು!

ಆ ಚಿತ್ರ ಕೂಡ ಸಾಕಷ್ಟು ವೈರಲ್ ಆಗಿತ್ತು. ಫೆಬ್ರವರಿ 30 ಎಂಬ ಹೆಸರಿನ ಕನ್ನಡ ಸಿನಿಮಾದ್ದೊಂದು ಟೀಸರ್ ಕಳೆದ ನವೆಂಬರ್‌ನಲ್ಲಿ ಬಂದಿತ್ತು, ಅಸಲಿ ಸಿನಿಮಾ ಬಿಡುಗಡೆಯಾಯ್ತೋ ಇಲ್ಲವೋ ಗೊತ್ತಿಲ್ಲ. ನಿಗೂಢ ಪತ್ತೆದಾರಿ ಕಥೆಯದಿರಬಹುದು. ಅಮೆರಿಕದಲ್ಲಿ ಕೆಲವು ಸಮಾಧಿ ಶಿಲೆಗಳು ಆ ವ್ಯಕ್ತಿ ಸತ್ತ ತಾರೀಕು ಫೆಬ್ರವರಿ 31 ಎಂದು ತೋರಿಸುವಂಥವು ಇರುತ್ತವೆ.




ನಿಧನದ ತಾರೀಕು ನಿಖರವಾಗಿ ಗೊತ್ತಿಲ್ಲದಿದ್ದಾಗ ಹಾಗೆ ಬರೆಸುವುದು ಇಲ್ಲಿನ ಕ್ರಮ ಅಂತೆ. ಇರಲಿ, ಅಂತೂ ಫೆಬ್ರವರಿಯಲ್ಲಿ 29ಕ್ಕಿಂತ ಹೆಚ್ಚು ದಿನಗಳು ಎಂದು ಎಲ್ಲಾದರೂ ಕಾಣಿಸಿಕೊಂಡಾಗಲೆಲ್ಲ ಆ ವೈಚಿತ್ರವನ್ನು ತತ್‌ಕ್ಷಣ ಗಮನಿಸುತ್ತೇವೆ, ಅಷ್ಟರಮಟ್ಟಿಗೆ ನಮ್ಮೆಲ್ಲರ ಬುದ್ಧಿ ಹರಿತವಿದೆ ಎನ್ನುವುದು ಮೆಚ್ಚತಕ್ಕ ಅಂಶ.

ನಾಲ್ಕು ವರ್ಷಗಳಿಗೊಮ್ಮೆ ಫೆಬ್ರವರಿಯಲ್ಲಿ 29 ದಿನಗಳಿರುತ್ತವೆ, ಅದನ್ನು ಅಧಿಕವರ್ಷ ಎನ್ನುತ್ತೇವೆ, ಭೂಮಿಯು ಸೂರ್ಯನ ಸುತ್ತ ಸುತ್ತಲಿಕ್ಕೆ 365 ದಿನಗಳಿಗಿಂತ ತುಸು ಹೆಚ್ಚು ಸಮಯ ಬೇಕಾಗುವುದು, ನಾಲ್ಕು ವರ್ಷಗಳಲ್ಲಿ ಆ ಸಮಯವು ಒಂದು ದಿನದಷ್ಟಾಗುವುದು, ಅದೇ ಅಧಿಕ ದಿನ ಫೆಬ್ರವರಿಯ 29ನೆಯ ತಾರೀಕು. ಇಸವಿಯು ನಾಲ್ಕರಿಂದ ನಿಶ್ಶೇಷ ಭಾಗವಾದರೆ ಆ ಇಸವಿ ಅಧಿಕ ವರ್ಷ.

ಈಗ ನಡೆಯುತ್ತಿರುವ 2026ನೆಯ ಇಸವಿಯು 4ರಿಂದ ನಿಶ್ಶೇಷ ಭಾಗವಾಗುವುದಿಲ್ಲ ಆದ್ದರಿಂದ ಇದು ಅಧಿಕವರ್ಷ ಅಲ್ಲ, ಫೆಬ್ರವರಿಯಲ್ಲಿ 29 ದಿನಗಳಿಲ್ಲ. ಮುಂದೆ 2028ನೆಯ ಇಸವಿಯು ಅಧಿಕ ವರ್ಷವಾಗಿ ಕಂಗೊಳಿಸಲಿದೆ. ಈ 4ರಿಂದ ನಿಶ್ಶೇಷ ಭಾಗಾಕಾರ ಸ್ಥೂಲ ಲೆಕ್ಕಾಚಾರ ಅಷ್ಟೇ. ಏಕೆಂದರೆ ಅದಕ್ಕೆ ಮತ್ತಷ್ಟು ಫೈನ್ ಟ್ಯೂನಿಂಗ್ ಬೇಕಾಗುತ್ತದೆ. ನಾಲ್ಕು ವರ್ಷಗಳಿಗೊಮ್ಮೆ ಒಂದು ದಿನದಂತೆ ಹೆಚ್ಚುತ್ತ ಹೋಗಿ 100 ವರ್ಷಗಳಾದಾಗ ಅದು ತುಸು ಹೆಚ್ಚೇ ಹೆಚ್ಚಾಗುತ್ತದೆ; ಆ 100ನೇ ವರ್ಷದ ಇಸವಿ 4ರಿಂದ ನಿಶ್ಶೇಷ ಭಾಗವಾದರೂ ಅಧಿಕವರ್ಷ ಅಲ್ಲವೆಂದು ಪರಿಗಣಿಸುವುದು.

ಆದ್ದರಿಂದಲೇ 1900, 2100 ಇವೆಲ್ಲ ಅಧಿಕವರ್ಷಗಳಲ್ಲ. ಅಷ್ಟು ಮಾಡಿದರೂ ಎಡ್ಜಸ್ಟ್‌ಮೆಂಟ್ ಸರಿಯಾಗುವುದಿಲ್ಲ, 400 ವರ್ಷಗಳಾದಾಗ ಒಂದು ದಿನ ಸೇರಿಸಬೇಕಾದ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಇಸವಿಯು 400 ರಿಂದ ನಿಶ್ಶೇಷ ಭಾಗವಾದರೆ ಅಧಿಕವರ್ಷ ಎಂದು ಪರಿಗಣಿಸುವುದು. ಹಾಗಾಗಿಯೇ 2000ನೆಯ ಇಸವಿ ಅಧಿಕವರ್ಷ ಆಗಿದ್ದದ್ದು. ಒಟ್ಟಿನಲ್ಲಿ ಫೆಬ್ರವರಿ ತಿಂಗಳು ಕಿರಿದು ಅಷ್ಟೇ ಅಲ್ಲ ದಿನಗಣನೆಯಲ್ಲಿ ಸ್ವಲ್ಪ ಕಿರಿಕಿರಿಯದು ಕೂಡ!

ಫೆಬ್ರವರಿಯಲ್ಲಿ ಸಾಮಾನ್ಯವಾಗಿ 28 ದಿನಗಳಷ್ಟೇ ಇರುವುದರಿಂದ ಅದಕ್ಕೆ ಇನ್ನೊಂದು ಅನನ್ಯ ಹೆಗ್ಗಳಿಕೆಯೂ ಇದೆ. ಏನೆಂದರೆ, ಹುಣ್ಣಿಮೆ ಬಾರದಿರುವ ತಿಂಗಳೊಂದು ಇಡೀ ಕ್ಯಾಲೆಂಡರ್‌ನಲ್ಲಿ ಸಾಧ್ಯವಿದ್ದರೆ ಅದು ಫೆಬ್ರವರಿ ಮಾತ್ರ! ಅದರರ್ಥ ಫೆಬ್ರವರಿ ತಿಂಗಳಲ್ಲಿ ಹುಣ್ಣಿಮೆ ಬರುವುದಿಲ್ಲ ಎಂದಲ್ಲ.

ಈ ವರ್ಷ ಫೆಬ್ರವರಿ 1ರಂದೇ ಹುಣ್ಣಿಮೆ ಇದೆಯಲ್ಲ! ಒಂದು ವೇಳೆ ಈ ಹುಣ್ಣಿಮೆಯು ಜನವರಿ 31ಕ್ಕೆ ಬಂದಿತ್ತು ಅಂದ್ಕೊಳ್ಳಿ. ಮುಂದಿನ ಹುಣ್ಣಿಮೆ ಮಾರ್ಚ್ 1ಕ್ಕಿಂತ ಮೊದಲು ಬರುವುದು ಸಾಧ್ಯವಿಲ್ಲ. ಆಗ ಫೆಬ್ರವರಿಯು ಹುಣ್ಣಿಮೆರಹಿತ ತಿಂಗಳು ಆಗುತ್ತಿತ್ತಲ್ಲವೇ? ಶತಮಾನದಲ್ಲಿ ನಾಲ್ಕೈದು ಸಲ ಹೀಗೆ ಆಗುವುದಿದೆ.

1999ರಲ್ಲಿ, ಅದಾದ ಮೇಲೆ 2018ರಲ್ಲಿ ಫೆಬ್ರವರಿ ಹುಣ್ಣಿಮೆ ರಹಿತ ಆಗಿತ್ತು. ಮುಂದೆ 2037ರ ಫೆಬ್ರವರಿಯೂ ಹುಣ್ಣಿಮೆರಹಿತ ಇರಲಿದೆ. ಅಧಿಕ ವರ್ಷದ ಫೆಬ್ರವರಿ, ಅಂದರೆ 29 ದಿನಗಳುಳ್ಳದ್ದು ಕೂಡ ಹುಣ್ಣಿಮೆರಹಿತ ಆಗುವುದು ಸಾಧ್ಯವಿದೆಯೇ? ಇದೆ, ತೀರಾ ಅಪರೂಪಕ್ಕೊಮ್ಮೆ. ಈಹಿಂದೆ 1608ರ ಫೆಬ್ರವರಿ ಹುಣ್ಣಿಮೆ ರಹಿತ ಆಗಿತ್ತು, ಮುಂದೆ 2527ರ ಫೆಬ್ರವರಿಯೂ ಹುಣ್ಣಿಮೆರಹಿತ ಇರಲಿದೆ ಎಂದು ಬ್ರಿಟಿಷ್ ಅಸ್ಟ್ರಾನಾಮಿಕಲ್ ಅಸೋಸಿಯೇಷನ್‌ನ ಜರ್ನಲ್‌ನಲ್ಲಿ ಪೀಟರ್ ಮೆಕ್ ಡೊನಾಲ್ಡ್ ಎಂಬ ಮೇಧಾವಿ ಖಗೋಳಶಾಸ್ತ್ರಜ್ಞನು ಲೆಕ್ಕಾಚಾರ ಮಾಡಿಟ್ಟಿದ್ದಾನೆ.

ಹುಣ್ಣಿಮೆರಹಿತ ಫೆಬ್ರವರಿ ಬಂದಾಗೆಲ್ಲ ಸಾಮಾನ್ಯವಾಗಿ ಒಂದೋ ಜನವರಿಯಲ್ಲಿ ಅಥವಾ ಮಾರ್ಚ್‌ನಲ್ಲಿ ಎರಡೆರಡು ಹುಣ್ಣಿಮೆಗಳು ಬರುತ್ತವೆ. ಹಾಗೆ ಒಂದು ಕ್ಯಾಲೆಂಡರ್ ತಿಂಗಳಲ್ಲಿ ಎರಡು ಹುಣ್ಣಿಮೆಗಳು ಬಂದರೆ ಅದನ್ನೇ ಬ್ಲೂಮೂನ್ ಎನ್ನುವುದು. ಒನ್ಸ್ ಇನ್ ಎ ಬ್ಲೂಮೂನ್ ಎಂಬ ನುಡಿಗಟ್ಟು, ಅಪರೂಕ್ಕೊಮ್ಮೆ ಸಂಭವಿಸುವುದು ಎಂಬರ್ಥದ್ದು, ಬಂದಿರುವುದು ಹಾಗೆ. ಎರಡೆರಡು ಹುಣ್ಣಿಮೆ ಬರುವ ಸಾಧ್ಯತೆ ಜನವರಿ ಅಥವಾ ಮಾರ್ಚ್‌ನಲ್ಲಿ ಮಾತ್ರ ಅಂತೇನಿಲ್ಲ. -ಫೆಬ್ರವರಿ ಹೊರತುಪಡಿಸಿ ಯಾವುದೇ ತಿಂಗಳಲ್ಲಾದರೂ ಬರಬಹುದು.

ಈ ವರ್ಷ ಫೆಬ್ರವರಿ ತಿಂಗಳಲ್ಲಿ ತಲಾ ನಾಲ್ಕು ಭಾನುವಾರ, ಸೋಮವಾರ, …ಶನಿವಾರ ಇವೆ. ಇದು 823 ವರ್ಷಗಳಿಗೊಮ್ಮೆ ಸಂಭವಿಸುವ ಅಪರೂಪದ ವಿದ್ಯಮಾನ! ಎಂಬ ಬಂಡಲ್‌ಬಾಜಿ ಫಾರ್ವರ್ಡ್ ಮೆಸೇಜು ನಿಮಗೂ ಬಂದಿರಬಹುದು. ಅಧಿಕವರ್ಷವಲ್ಲದ ಪ್ರತಿ ಇಸವಿಯಲ್ಲೂ ಫೆಬ್ರವರಿಯಲ್ಲಿ ತಲಾ ನಾಲ್ಕು ಭಾನುವಾರ, ಸೋಮವಾರ, …ಶನಿವಾರಗಳೇ ಇರುವುದು.

ಆದ್ದರಿಂದ 823 ವರ್ಷಗಳಿಗೊಮ್ಮೆ ಎನ್ನುವುದು ಬಕ್ವಾಸ್. ಆದರೆ ಪ್ರತಿ ಆರು ಅಥವಾ ಹನ್ನೊಂದು ವರ್ಷಗಳಿಗೊಮ್ಮೆ ಏನಾಗುತ್ತದೆಂದರೆ ಫೆಬ್ರವರಿ ತಿಂಗಳು ಭಾನುವಾರದಂದು ಆರಂಭವಾಗಿ ಶನಿವಾರದಂದು ಮುಗಿಯುತ್ತದೆ. ಅಂದರೆ ಕ್ಯಾಲೆಂಡರ್‌ನಲ್ಲಿ 28 ದಿನಗಳು ಪರ್ಫೆಕ್ಟ್ ಆಯತಾಕಾರದಲ್ಲಿ ಕೂತಿರುತ್ತವೆ.

ಇಂಥದನ್ನು ಪರ್ಫೆಕ್ಟ್ ಫೆಬ್ರವರಿ ಅಥವಾ ರೆಕ್ಟಾಂಗ್ಯುಲರ್ ಫೆಬ್ರವರಿ ಎನ್ನುವುದಿದೆ. ಈ ವರ್ಷದ್ದು (2026) ಪರ್ಫೆಕ್ಟ್ ರೆಕ್ಟಾಂಗ್ಯುಲರ್ ಫೆಬ್ರವರಿ. ಈ ಹಿಂದೆ 2015ರಲ್ಲಿ, ಅದಕ್ಕಿಂತಲೂ ಹಿಂದೆ 2009ರಲ್ಲಿ ಪರ್ಫೆಕ್ಟ್ ರೆಕ್ಟಾಂಗ್ಯುಲರ್ ಫೆಬ್ರವರಿ ಇತ್ತು. ಮುಂದಿನದು 2037ರಲ್ಲಿ. ಮೇಲೆ ಹೇಳಿದಂತೆ ಅದು ಹುಣ್ಣಿಮೆರಹಿತ ಸಹ ಆಗಲಿರುವುದರಿಂದ ಹುಣ್ಣಿಮೆರಹಿತ ಪರ್ಫೆಕ್ಟ್ ರೆಕ್ಟಾಂಗ್ಯುಲರ್ ಫೆಬ್ರವರಿ!

ಇದರ ಆವರ್ತನ ಆರು ಅಥವಾ ಹನ್ನೊಂದು ವರ್ಷಗಳಿಗೊಮ್ಮೆ ಅಂತಾಗುವುದಕ್ಕೆ ಕಾರಣ ನಡುವೆ ಒಂದೆರಡು ಅಧಿಕವರ್ಷಗಳು ಬರುವುದು. ಅಧಿಕ ವರ್ಷ ಗಣನೆಗೆ 100 ಮತ್ತು 400ರ ಅಪವರ್ತ್ಯಗಳನ್ನೂ ಪರಿಗಣಿಸುವುದರಿಂದ ಮತ್ತಷ್ಟು ಸಂಕೀರ್ಣವಾಗುತ್ತದೆ. ಆದರೆ 823 ವರ್ಷಗಳಿಗೊಮ್ಮೆ ಎನ್ನುವುದಂತೂ ಸುಳ್ಳು.

ಪರ್ಫೆಕ್ಟ್ ಫೆಬ್ರವರಿಯದೊಂದು ಇಂಪರ್ಫೆಕ್ಷನ್ ಕೂಡ ಇದೆ, ಅದೇನು ಗೊತ್ತೇ? ಪರ್ಫೆಕ್ಟ್ ಫೆಬ್ರವರಿಯಲ್ಲಿ ಮತ್ತು ಆ ಇಸವಿಯ ಮಾರ್ಚ್ ಹಾಗೂ ನವೆಂಬರ್ ತಿಂಗಳಲ್ಲೂ 13ನೆಯ ತಾರೀಕು ಶುಕ್ರವಾರವೇ ಬರುತ್ತದೆ! ಫ್ರೈಡೇ ದ ಥರ್ಟೀನ್ತ್ ಅಪಶಕುನ ಎಂದು ನಂಬುವವರಿಗೆ ಒಂದೇ ವರ್ಷದಲ್ಲಿ ಮೂರು ಹೊಡೆತಗಳು. ಇದೂ ಅಷ್ಟೇ. 13ನೆಯ ತಾರೀಕು ಶುಕ್ರವಾರದಂದು ಬರುವುದು ವರ್ಷದ ಯಾವುದೇ ತಿಂಗಳಲ್ಲೂ ಬರಬಹುದು.

ಅಧಿಕವರ್ಷದ ಫೆಬ್ರವರಿಯಲ್ಲಿಯೂ ಬರಬಹುದು. ಆದರೆ ವರ್ಷಕ್ಕೆ ಮೂರು ಸಲ ಬರುತ್ತದೆಯೆಂದರೆ ಅದು ಪರ್ಫೆಕ್ಟ್ ಫೆಬ್ರವರಿ ಇಸವಿಗಳಲ್ಲಿ, ಅಥವಾ ಅಧಿಕವರ್ಷದ ಜನವರಿ 1 ಭಾನುವಾರ ಬಂದಿದ್ದರೆ ಆ ವರ್ಷದ ಜನವರಿ, ಏಪ್ರಿಲ್, ಮತ್ತು ಜುಲೈ ತಿಂಗಳಲ್ಲಿ ಫ್ರೈಡೇ ದ ಥರ್ಟೀನ್ತ್ ಬರುತ್ತದೆ.

ಇಷ್ಟು ಲೆಕ್ಕಾಚಾರಗಳನ್ನು ಓದಿದಾಗ ಬಹುಶಃ ನಿಮ್ಮಲ್ಲಿ ಕೆಲವರಿಗೆ ಕಿರಿಕಿರಿ ಎನಿಸಿರಬಹುದು, ತಲೆಚಿಟ್ಟು ಹಿಡಿದಿರಬಹುದು. ಅದಕ್ಕೋಸ್ಕರ ಕ್ಷಮೆಯಿರಲಿ. ಈಗ ಲೆಕ್ಕಾಚಾರಗಳನ್ನು ಅಲ್ಲಿಗೇ ನಿಲ್ಲಿಸಿ ಫೆಬ್ರವರಿಯ ಇನ್ನೊಂದಿಷ್ಟು ವೈಶಿಷ್ಟ್ಯಗಳನ್ನು ನೋಡೋಣ.

ಫೆಬ್ರವರಿ ತಿಂಗಳಿಗೆ ಆ ಹೆಸರು ಬಂದಿದ್ದು ಹೇಗೆ? ಲ್ಯಾಟಿನ್ ಭಾಷೆಯ ಫೆಬ್ರುವಾ ಎಂಬ ಪದದಿಂದ. ಲ್ಯಾಟಿನ್‌ನಲ್ಲಿ ಅದರ ಅರ್ಥ ನಿರ್ಮಲೀಕರಣ ಎಂದು. ನಿರ್ಮಲೀಕರಣವೆಂದರೆ ಅಂತರಂಗದ ಶುದ್ಧಿ ಮತ್ತು ಬಹಿರಂಗದ ಶುದ್ಧಿ ಎರಡೂ. ಪ್ರಾಚೀನ ರೋಮನ್ನರು ಫೆಬ್ರವರಿಯನ್ನು ಫೆಬ್ರುವಾ ಲಿಯ ಎಂದು ಕರೆಯುತ್ತಿದ್ದರು ಮತ್ತು ಪಾಪಪರಿಹಾರಾರ್ಥ ಪ್ರಾಯಶ್ಚಿತ್ತಗಳಿಗೆ ಬಳಸುತ್ತಿದ್ದರಂತೆ.

ಈಗಲೂ ಯುರೋಪ್, ಅಮೆರಿಕ ದೇಶಗಳಲ್ಲಿ ಫೆಬ್ರವರಿಯಲ್ಲಿ ತೀವ್ರ ಚಳಿಗಾಲ ಇರುವುದರಿಂದ, ಹೊರಾಂಗಣ ಚಟುವಟಿಕೆಗಳು ಸಾಧ್ಯವಿಲ್ಲದಿರುವುದರಿಂದ, ಮನೆ-ಮನ ಚೊಕ್ಕಗೊಳಿಸುವ ಕೆಲಸಗಳನ್ನು ಇಟ್ಟುಕೊಳ್ಳುತ್ತಾರೆ. ಇದು, ಮುಂದೆ ಸ್ಪ್ರಿಂಗ್ ಸೀಸನ್ ಅನ್ನು ಸ್ವಾಗತಿಸಲು ತಯಾರಿಯೂ ಹೌದು.

ಚಳಿಗಾಲ ಮತ್ತು ಫೆಬ್ರವರಿಗೆ ಸಂಬಂಧಿಸಿದಂತೆ, ಅಮೆರಿಕದಲ್ಲಿ ಪ್ರತಿವರ್ಷ ಫೆಬ್ರವರಿ 2ರಂದು ಆಚರಿಸುವ ಗ್ರೌಂಡ್‌ಹಾಗ್ ಡೇ ಕೂಡ ಸ್ವಾರಸ್ಯಕರ ಸಂಗತಿಯೇ. ಮೂಲತಃ ಜರ್ಮನ್ ದೇಶದವರ ಒಂದು ನಂಬಿಕೆಯಂತೆ ಆರಂಭವಾಗಿರುವ ಇದು ಹೆಚ್ಚು ಪ್ರಸಿದ್ಧವಿರುವುದು ಅಮೆರಿಕ ಮತ್ತು ಕೆನಡಾ ದೇಶಗಳಲ್ಲಿ.

ಚಳಿಗಾಲದಲ್ಲಿ ಬಿಲದಲ್ಲಿ ನಿಶ್ಚೇಷ್ಟತೆಯಿಂದಿರುವ ಗ್ರೌಂಡ್‌ಹಾಗ್ ಪ್ರಾಣಿಯು (ಹೆಚ್ಚೂಕಡಿಮೆ ಅಳಿಲನ್ನು ಹೋಲುವಂಥದು) ಫೆಬ್ರವರಿ 2ರಂದು ಬಿಲದಿಂದ ಹೊರ ಬಂದು ಇಣುಕಿ ನೋಡುತ್ತದೆ. ಆಗ ಅದಕ್ಕೆ ತನ್ನದೇ ನೆರಳು ಕಂಡರೆ (ಅಂದರೆ ಆವತ್ತು ಬಿಸಿಲಿದ್ದರೆ) ಇನ್ನೂ ಆರು ವಾರಗಳ ಕಾಲ ಚಳಿ ಮುಂದುವರಿಯುತ್ತದೆ ಎಂದು ಲೆಕ್ಕ.

ಒಂದು ವೇಳೆ ಅದಕ್ಕೆ ನೆರಳು ಕಾಣದಿದ್ದರೆ (ಅಂದರೆ ಆವತ್ತು ಮೋಡ ಕವಿದ ವಾತಾವರಣ ಇದ್ದರೆ) ಚಳಿಗಾಲ ಬೇಗ ಮುಗಿಯುತ್ತದೆಂದು ನಂಬಿಕೆ. ಗ್ರೌಂಡ್‌ಹಾಗ್ ಡೇಯ ಅತ್ಯಂತ ಪ್ರಸಿದ್ಧ ಆಚರಣೆ ಪೆನ್ಸಿಲ್ವೇನಿಯಾ ಸಂಸ್ಥಾನದ ಪಂಕ್ಸ್ ಟಾನಿ ಎಂಬ ಪಟ್ಟಣದಲ್ಲಿ ನಡೆಯುತ್ತದೆ. ಅಲ್ಲಿ ಪಂಕ್ಸ್ ಟಾನಿ ಫಿಲ್ ಎಂಬ ಹೆಸರಿನ ಗ್ರೌಂಡ್‌ಹಾಗ್ ಈ ಕಾರ್ಯಕ್ರಮದ ಮುಖ್ಯ ಪಾತ್ರ. ಜನರು ಫಿಲ್ ತನ್ನ ಬಿಲದಿಂದ ಹೊರಬರುವುದನ್ನು ನೋಡಲು ದೊಡ್ಡ ಸಂಖ್ಯೆಯಲ್ಲಿ ಸೇರುತ್ತಾರೆ.

ಫಿಲ್‌ನ ವರ್ತನೆಯ ಆಧಾರದ ಮೇಲೆ ಹವಾಮಾನವನ್ನು ಅಂದಾಜಿಸುತ್ತಾರೆ. ಈ ಸಂಪ್ರದಾಯಕ್ಕೆ ವೈಜ್ಞಾನಿಕ ಪ್ರಮಾಣಗಳು ಸ್ಪಷ್ಟವಾಗಿಲ್ಲದಿದ್ದರೂ, ಇದು ಇಂದಿಗೂ ಜನಪ್ರಿಯ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಉಳಿದಿದೆ. 1993ರಲ್ಲಿ ಇದರ ಬಗ್ಗೆ ಒಂದು ಗ್ರೌಂಡ್‌ಹಾಗ್ ಡೇ ಹೆಸರಿನ ಚಲನ ಚಿತ್ರವೂ ನಿರ್ಮಾಣವಾಗಿತ್ತು. ಈಗಲೂ ಫೆಬ್ರವರಿ 2ರಂದು ಅದನ್ನು ಟಿವಿ ವಾಹಿನಿಗಳು ಶ್ರದ್ಧೆಯಿಂದ ಬಿತ್ತರಿಸುತ್ತವೆ.

ಅಮೆರಿಕದ ಇನ್ನೊಂದು ಕ್ರೇಜ್ ಸೂಪರ್‌ಬೌಲ್ ಸಂಡೇ ಸಹ ಫೆಬ್ರವರಿಯಲ್ಲೇ ಜರುಗುವುದು. ಕಾಲುಗಳಿಂದಲ್ಲದೆ ಕೈಗಳಿಂದ ಚೆಂಡಾಟ ಆಡಿ ಫುಟ್‌ಬಾಲ್ ಎಂದು ಕರೆಯುವುದೇ ಒಂದು ವಿಚಿತ್ರವಾದರೆ, ಅಮೆರಿಕದೊಳಗಿನ ವಿವಿಧ ತಂಡಗಳಷ್ಟೇ ಭಾಗವಹಿಸುವುದಾದರೂ ಅದನ್ನು ವರ್ಲ್ಡ್ ಕಪ್ ಎಂದು ಕರೆಯುವುದು ಇನ್ನೊಂದು ವಿಚಿತ್ರ. ಆದರೂ ಕ್ರೀಡಾಭಿಮಾನಿಗಳಿಗೆ ಅದೊಂದು ದೊಡ್ಡ ವಾರ್ಷಿಕ ಜಾತ್ರೆ.

ಟಿವಿಯಲ್ಲಿ ನೇರಪ್ರಸಾರವನ್ನು ಮಿಲಿಯಗಟ್ಟಲೆ ಸಂಖ್ಯೆಯಲ್ಲಿ ನೋಡಲಾಗುತ್ತದೆಂಬ ಅಗ್ಗಳಿಕೆ. ಆ ಸಂದರ್ಭಕ್ಕೆಂದೇ ನಿರ್ಮಾಣವಾಗಿ ಪ್ರಸಾರವಾಗುವ ವಿಶೇಷ ಜಾಹೀರಾತುಗಳು, ಪಂದ್ಯದ ಮಧ್ಯಂತರದಲ್ಲಿ ನಡೆಯುವ ಮನೋರಂಜನಾ ಕಾರ್ಯಕ್ರಮ… ಇವೆಲ್ಲ ಬಹುಚರ್ಚಿತ ಆಗುತ್ತವೆ.

ನವೆಂಬರ್‌ನಲ್ಲಿ ಆಚರಣೆಯಾಗುವ ಥ್ಯಾಂಕ್ಸ್‌ಗಿವಿಂಗ್ ಹಬ್ಬ ಬಿಟ್ಟರೆ ರಾಷ್ಟ್ರಮಟ್ಟದಲ್ಲಿ ಅತಿಹೆಚ್ಚು ಆಹಾರಭಕ್ಷಣ, ಮದ್ಯಸೇವನೆ (ಪಂದ್ಯ ನೋಡುವಾಗ ಸ್ಟೇಡಿಯಂನಲ್ಲಾದರೂ ಸರಿ, ಮನೆಯಲ್ಲಿ ಅಥವಾ ಟಿವಿ-ವೀಕ್ಷಣೆ ಪಾರ್ಟಿಗಳಲ್ಲಾದರೂ ಸರಿ) ಆಗುವುದು ಆ ದಿನದಂದೇ.

ಫೆಬ್ರವರಿ ತಿಂಗಳ ಮೊದಲ ಭಾನುವಾರ ನಡೆಯುತ್ತಿದ್ದ ಸೂಪರ್‌ಬೌಲ್ ಈಗ 2021ರಿಂದೀಚೆಗೆ ಫೆಬ್ರವರಿ ತಿಂಗಳ ಎರಡನೆಯ ಭಾನುವಾರಕ್ಕೆ ಶಿಫ್ಟ್ ಆಗಿದೆ. ಅಬ್ಬರ ಮಾತ್ರ ಹಾಗೆಯೇ ಇದೆ. ಮತ್ತೆ, ಫೆಬ್ರವರಿ 14ರಂದು ಆಚರಿಸುವ ವ್ಯಾಲೆಂಟೈನ್ಸ್ ಡೇ ಅರ್ಥಾತ್ ಪ್ರೇಮಿಗಳ ದಿನಾಚರಣೆ ಮರೆಯ ಲಿಕ್ಕುಂಟೇ? ಅಮೆರಿಕದಲ್ಲಷ್ಟೇ ಅಲ್ಲ ಜಗತ್ತಿನ ಹಲವಾರು ದೇಶಗಳಲ್ಲಿ ಆಚರಣೆ. ಹಾಗೆ ನೋಡಿದರೆ ಬಹುಶಃ ಅಮೆರಿಕದಲ್ಲಿರುವುದಕ್ಕಿಂತಲೂ ಭಾರತದಲ್ಲಿ, ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಈಗ ವ್ಯಾಲೆಂಟೈನ್ಸ್ ಡೇ ಸಂಭ್ರಮ (ಬೇಕಿದ್ದರೆ ಹುಚ್ಚುತನ ಎನ್ನಿ) ಹೆಚ್ಚು!




ಉಡುಗೊರೆಗಳು, ಚಾಕೊಲೇಟ್‌ಗಳು, ಗ್ರೀಟಿಂಗ್ ಕಾರ್ಡ್‌ಗಳು, ಪ್ರೇಮ ಪತ್ರಗಳ (ಈಗ ಪತ್ರಗಳಲ್ಲ, ಮೇಘಸಂದೇಶಗಳ) ಭರಾಟೆ. ಈಗ ಇದು ಬರೀ ಪ್ರೇಮಿಗಳ ದಿನಾಚರಣೆಯಾಗಿರದೆ ಸ್ನೇಹಿತರಿಗೂ ಮತ್ತು ಕುಟುಂಬದ ಸದಸ್ಯರಿಗೂ ತಮ್ಮ ಪ್ರೀತಿ ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸುವ ದಿನವೂ ಆಗಿದೆ. ಮೂಲತಃ ಕ್ರಿ.ಶ. ಮೂರನೇ ಶತಮಾನದಲ್ಲಿ ಬದುಕಿದ್ದ ಕ್ರೈಸ್ತ ಧರ್ಮದ ಹುತಾತ್ಮ ಸಂತ ವ್ಯಾಲೆಂಟೈನ್ ಸ್ಮರಣೆಗಾಗಿ ಆರಂಭವಾದದ್ದು, ಈಗ ಧರ್ಮನಿರಪೇಕ್ಷವಾಗಿ ವಿಭಿನ್ನ ಸಂಸ್ಕೃತಿ ಮತ್ತು ನಂಬಿಕೆಗಳ ಜನರು ಕೂಡ ಆಚರಿಸುವ ಹಬ್ಬವಾಗಿ ರೂಪಾಂತರಗೊಂಡಿದೆ.

ಅಮೆರಿಕದ ಮಟ್ಟಿಗೆ ಹೇಳುವುವಾದರೆ ರಾಷ್ಟ್ರದ ಪಿತಾಮಹ ಮೊತ್ತಮೊದಲ ರಾಷ್ಟ್ರಾಧ್ಯಕ್ಷ ಜಾರ್ಜ್ ವಾಷಿಂಗ್ಟನ್‌ನ ಜನ್ಮದಿನ ಫೆಬ್ರವರಿ 22ರಂದು. ಈಗ ಅದನ್ನು ತಾರೀಕು ಪ್ರಕಾರ ಆಚರಿಸದೆ ಫೆಬ್ರವರಿ ತಿಂಗಳ ಮೂರನೆಯ ಸೋಮವಾರ ಆಚರಿಸಲಾಗುತ್ತದೆ. ಅಂತೆಯೇ, ಅಮೆರಿಕದ ಇನ್ನೊಬ್ಬ ಪ್ರಸಿದ್ಧ ರಾಷ್ಟ್ರಾಧ್ಯಕ್ಷ ಅಬ್ರಹಾಂ ಲಿಂಕನ್‌ನ ಜನ್ಮದಿನ ತಾರೀಕು ಪ್ರಕಾರ ಫೆಬ್ರವರಿ 12ರಂದು ಆದರೂ, ಜಾರ್ಜ್ ವಾಷಿಂಗ್ಟನ್‌ನ ಜತೆ ಸೇರಿಸಿ ಒಟ್ಟಾಗಿ ಪ್ರೆಸಿಡೆಂಟ್ಸ್ ಡೇ ಎಂದು ಆಚರಿಸಲಾಗುತ್ತದೆ.

ಆವತ್ತು ಸರಕಾರಿ ರಜಾದಿನ. ಯಥಾಪ್ರಕಾರ ಆ ದಿನದ ಆಸುಪಾಸಿನಲ್ಲಿ ಪ್ರೆಸಿಡೆಂಟ್ಸ್ ಡೇ ಸೇಲ್ಸ್ ಎಂದು ಭರ್ಜರಿ ವ್ಯಾಪಾರ. ಶನಿ-ಭಾನು-ಸೋಮ ಮೂರು ದಿನಗಳ ಲಾಂಗ್ ವೀಕೆಂಡ್ ಆಗುವುದರಿಂದ, ಹಿಮಪಾತ ಕಾಟದಿಂದಾಗಿ ದೂರದೂರದ ಪ್ರವಾಸ ಸಾಧ್ಯವಾಗದಿದ್ದರೂ ಸೀಮಿತ ಅವಕಾಶದಲ್ಲಿ ರಜೆಯ ಮಜಾ.

ಫೆಬ್ರವರಿಯಲ್ಲೇ ಕೆಲವು ತಮಾಷೆಯ, ಕೆಲವು ಅರ್ಥಪೂರ್ಣ ದಿನಾಚರಣೆಗಳೂ ಇವೆ. ಅಂಚೆಯಣ್ಣನಿಗೆ ಕೃತಜ್ಞತೆ ಸಲ್ಲಿಕೆ ದಿನ (ಫೆ.4), ಹವಾಮಾನ ವರದಿಗಾರನ ದಿನ (ಫೆ.5), ಮಿತ್ರನಿಗೊಂದು ಪತ್ರ ಬರೆ ದಿನ (ಫೆ.7), ಯಾದೃಚ್ಛಿಕ ಕರುಣೆ ತೋರುವ ದಿನ (ಫೆ.17), ನಾಯಿಗೆ ಬಿಸ್ಕತ್ತು ಹಾಕು ದಿನ (ಫೆ.23), ಹಿರಿಯರಿಗೊಂದು ಪತ್ರ ಬರೆ ದಿನ (ಫೆ.26), ಪುಷ್ಪಾಲಂಕಾರ ದಿನ (ಫೆ.28) ಇತ್ಯಾದಿ.

ಇದಲ್ಲದೆ ಫೆಬ್ರವರಿ ತಿಂಗಳಿಡೀ ನ್ಯಾಷನಲ್ ಬ್ಲ್ಯಾಕ್ ಹಿಸ್ಟರಿ ಮಂತ್ ಆಚರಿಸಲಾಗುತ್ತದೆ. ರಾಷ್ಟ್ರದ ಅಭ್ಯುದಯದಲ್ಲಿ ಕರಿಯರ ಪಾತ್ರ-ಪ್ರಯತ್ನ-ಸಾಧನೆಗಳನ್ನು ಗುರುತಿಸಿ ಗೌರವಿಸುವ ವಿವಿಧ ಕಾರ್ಯಕ್ರಮಗಳಿರುತ್ತವೆ. 50 ಸಂಸ್ಥಾನಗಳ ಪೈಕಿ ಮಸ್ಸಾಚ್ಯುಸೆಟ್ಸ್, ಮೆಯ್ನ್, ಒರೆಗಾನ್, ಅರಿಝೋನಾ ಮತ್ತು ಮಿಸ್ಸಿಸ್ಸಿಪ್ಪಿ- ಇವುಗಳ ರಾಜ್ಯೋತ್ಸವ ದಿನಗಳೂ ಫೆಬ್ರವರಿಯಲ್ಲೇ ಬರುವುದರಿಂದ ಸ್ಥಳೀಯವಾಗಿ ಕೆಲವು ಆಚರಣೆಗಳಿರುತ್ತವೆ.

ಅಮೆರಿಕದ ನ್ಯೂಆರ್ಲಿಯನ್ಸ್ ನಗರದಲ್ಲಿ ವಿಶೇಷವಾಗಿ, ಮತ್ತು ದೇಶದ ಇತರೆಡೆಗಳಲ್ಲೂ ಆಚರಿಸಲಾಗುವ ಮಾರ್ಡಿ ಗ್ರಾ ಹಬ್ಬವೂ ಕೆಲವೊಮ್ಮೆ ಫೆಬ್ರವರಿಯಲ್ಲೇ ಬರುತ್ತದೆ. ಈಸ್ಟರ್‌ನಿಂದ ಹಿಂದಕ್ಕೆ 47 ದಿನಗಳ ಲೆಕ್ಕ ಹಾಕಿದಾಗಿನ ಮಂಗಳವಾರ ಮಾರ್ಡಿ ಗ್ರಾ ಹಬ್ಬ. ಮಾರನೆಯ ದಿನದಿಂದ ಉಪವಾಸ ಅಥವಾ ಮಾಂಸರಹಿತ ಮಿತಾಹಾರ ಸೇವನೆಯ ವ್ರತವಿರುವುದರಿಂದ ಆವತ್ತು ಹೊಟ್ಟೆ ಬಿರಿಯೆ ಭೋಜನ, ಮೋಜುಮಸ್ತಿ.

ಫ್ರೆಂಚ್ ಭಾಷೆಯಲ್ಲಿ ಮಾರ್ಡಿ ಗ್ರಾ ಎಂದರೆ ಕೊಬ್ಬಿದ ಮಂಗಳವಾರ ಎಂದೇ ಅರ್ಥ. ಪರೇಡ್‌ಗಳು, ಸಂಗೀತನೃತ್ಯ ಕೂಟಗಳು, ನೇರಳೆ, ಹಸುರು ಮತ್ತು ಬಂಗಾರ ಬಣ್ಣದ ಮಣಿಮಾಲೆಗಳು ಮಾರ್ಡಿ ಗ್ರಾ ಸಂಭ್ರಮದ ಪ್ರಮುಖ ಆಕರ್ಷಣೆ. ಅವು ಅನುಕ್ರಮವಾಗಿ ನ್ಯಾಯ, ವಿಶ್ವಾಸ ಮತ್ತು ಶಕ್ತಿಯ ಪ್ರತೀಕಗಳೆಂಬ ನಂಬಿಕೆ. ಈ ವರ್ಷ ಮಾರ್ಡಿ ಗ್ರಾ ಆಚರಣೆ ಫೆಬ್ರವರಿ 17ರಂದು. ಡಬಲ್ ಧಮಾಕಾ ಎಂಬಂತೆ ಚೈನೀಸ್ ಹೊಸವರ್ಷ ಆಚರಣೆ ಸಹ ಈ ವರ್ಷ ಫೆಬ್ರವರಿ 17ರಂದೇ ಬಂದಿದೆ!

ನೋಡಿ, ಹೇಗಿದೆ ಕಿರಿಯ ತಿಂಗಳ ಹಿರಿಮೆ! ಕೊನೆಯಲ್ಲೊಂದು ಪದವಿನೋದ. ಮಿಕ್ಕ ತಿಂಗಳುಗಳಿಗಿಂತ ಫೆಬ್ರವರಿಯಲ್ಲಿ ಕಡಿಮೆ ದಿನಗಳು ಆದ್ದರಿಂದ ಅದು ಕಿರಿದು, ಕೃಶಕಾಯದ್ದು, ಸುಲಭವಾಗಿ ಕುಣಿದಾಡಬಲ್ಲದ್ದು ಎಂಬ ನಿಟ್ಟಿನಲ್ಲಿ ಫೆಬ್ರವರಿ ಕ್ಯಾನ್ ಮಾರ್ಚ್; ಬಟ್ ಏಪ್ರಿಲ್ ಮೇ ನಾಟ್! ಇದನ್ನು ಅನುವಾದಿಸಿದರೆ ಸ್ವಾರಸ್ಯ ಹೊರಟುಹೋಗುತ್ತದೆ. ಆದರೂ, ಫೆಬ್ರವರಿಯು ಲೆಫ್ಟ್-ರೈಟ್ ಎಂದು ಮಾರ್ಚ್‌ಪಾಸ್ಟ್ ಮಾಡಬಲ್ಲದು; ಏಪ್ರಿಲ್‌ಗೆ ಸಾಧ್ಯವಾಗಲಿಕ್ಕಿಲ್ಲ ಎಂದು ಅರ್ಥ.


**- ಶ್ರೀವತ್ಸ** ಜೋಶಿ

---

**■ ಇದು ಪ್ರವಾಸೋದ್ಯಮ ಪರಿಸರ ಸಂರಕ್ಷಣೆ, ಸ್ಥಳೀಯರ ಜೀವನೋಪಾಯ, ಉದ್ಯೋಗ ಸೃಷ್ಟಿ, ಈ ಮೂರು ಅಂಶಗಳ ಸಮತೋಲನದ ಮಾದರಿ. ಕೃಷಿ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡಲಾಗಿದ್ದು, ಇದರಿಂದ ರೈತರಿಗೆ ಬೆಳೆಗಳ ಹೊರತಾದ ಆದಾಯದ ಹೊಸ ಮಾರ್ಗಗಳನ್ನು ತೆರೆದು, ಗ್ರಾಮೀಣ ಯುವಕರಿಗೆ ಉದ್ಯೋಗ ಸೃಷ್ಟಿಸುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳಿಗೆ ಇದು ಅತ್ಯಂತ ಪ್ರಾಸಂಗಿಕ.**

# ಪ್ರವಾಸೋದ್ಯಮ ವಿಕಸಿತ ಭಾರತದ ಆರ್ಥಿಕ ಶಕ್ತಿ

2026-27ರ ಕೇಂದ್ರ ಆಯವ್ಯಯ ನೈಸರ್ಗಿಕತೆಗೆ ಹೆಚ್ಚಿನ ಆದ್ಯತೆ ನೀಡಿದ್ದು, ಪ್ರವಾಸೋದ್ಯಮವೇ ವಿಕಸಿತ ಭಾರತಕ್ಕೆ ಹೊಸ ಆರ್ಥಿಕ ಶಕ್ತಿಯಾಗುವ ನಿಟ್ಟಿನಲ್ಲಿ ಬಜೆಟ್ ಮಂಡಿಸಲಾಗಿದೆ. ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಪ್ರವಾಸೋದ್ಯಮವನ್ನು ಸರಕಾರ ಕೇವಲ ಮನರಂಜನೆ ವಲಯವಾಗಿ ಅಲ್ಲದೆ ಉದ್ಯೋಗ ಸೃಷ್ಟಿ, ಗ್ರಾಮೀಣ ಸಬಲೀಕರಣ, ನೈಸರ್ಗಿಕ ಸಂಪತ್ತು, ಪ್ರಕೃತಿ ಸಂರಕ್ಷಣೆ ಮತ್ತು ಭಾರತದ ಜಾಗತಿಕ ಪ್ರತಿಷ್ಠೆ ನಿರ್ಮಾಣದ ಪ್ರಮುಖ ಆರ್ಥಿಕ ಸಾಧನವಾಗಿ ಮರು ಸ್ಥಾಪಿಸಿದೆ.



ತೆರಿಗೆ ಸುಧಾರಣೆಗಳ ಮೂಲಕ ಪ್ರವಾಸೋದ್ಯಮಕ್ಕೆ ವಿಶೇಷವಾಗಿ ವಿದೇಶಿ ಪ್ರವಾಸ ಪ್ಯಾಕೇಜ್‌ಗಳ ಮೇಲೆ ಟಿಸಿಎಸ್ ಅನ್ನು ಶೇ.2ಕ್ಕೆ ಇಳಿಸಿದ್ದು, ನಗದು ಹರಿವಿನ ಒತ್ತಡ ಕಡಿಮೆಯಾಗುವುದರ ಜತೆಗೆ ಟ್ರಾವೆಲ್ ಏಜೆನ್ಸಿಗಳು ಮತ್ತು ಟೂರ್ ಆಪರೇಟರ್‌ಗಳಿಗೆ ವ್ಯವಹಾರ ಸುಲಭಗೊಳಿಸಿದೆ. ಈ ಮೂಲಕ ಭಾರತವನ್ನು ಜಾಗತಿಕ ಪ್ರವಾಸ ಮಾರುಕಟ್ಟೆಯಲ್ಲಿ ಹೆಚ್ಚು ಸ್ಪರ್ಧಾತ್ಮಕ ವಾಗಿಸುವತ್ತ ಗಮನಹರಿಸಿದೆ.

ಮೊದಲ ಅಂತಾರಾಷ್ಟ್ರೀಯ ಬಿಗ್ ಕ್ಯಾಟ್ ಸಮ್ಮಿಟ್ ಮೂಲಕ ಹುಲಿ, ಸಿಂಹ, ಚಿರತೆ ಮೊದಲಾದ ದೊಡ್ಡ ಪ್ರಾಣಿಗಳೊಂದಿಗೆ ವಾಸ, ಅಧ್ಯಯನ, ಸಂರಕ್ಷಣೆಯಲ್ಲಿ ಭಾರತದ ನಾಯಕತ್ವವನ್ನು ವಿಶ್ವದ ಮುಂದೆ ತರುತ್ತದೆ. ಅದೇ ರೀತಿ ಟರ್ಟಲ್ ಟ್ರಯಲ್ಸ್ ಯೋಜನೆ ಮೂಲಕ ಕರ್ನಾಟಕದ ಕರಾವಳಿ ಮತ್ತು ಸಮುದ್ರ ಜೀವಿಗಳ ಸಂರಕ್ಷಣೆಯನ್ನು ಪ್ರವಾಸೋದ್ಯಮದ ಭಾಗವಾಗಿಸಲಾಗಿದೆ.


ಇದು ಪ್ರವಾಸೋದ್ಯಮ ಪರಿಸರ ಸಂರಕ್ಷಣೆ, ಸ್ಥಳೀಯರ ಜೀವನೋಪಾಯ, ಉದ್ಯೋಗ ಸೃಷ್ಟಿ, ಈ ಮೂರು ಅಂಶಗಳ ಸಮತೋಲನದ ಮಾದರಿ. ಕೃಷಿ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡಲಾಗಿದ್ದು, ಇದರಿಂದ ರೈತರಿಗೆ ಬೆಳೆಗಳ ಹೊರತಾದ ಆದಾಯದ ಹೊಸ ಮಾರ್ಗಗಳನ್ನು ತೆರೆದು, ಗ್ರಾಮೀಣ ಯುವಕರಿಗೆ ಉದ್ಯೋಗ ಸೃಷ್ಟಿಸುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳಿಗೆ ಇದು ಅತ್ಯಂತ ಪ್ರಾಸಂಗಿಕ.

ಪ್ರವಾಸೋದ್ಯಮದ ಗುಣಮಟ್ಟವನ್ನು ನಿರ್ಧರಿಸುವ ಮಾನವ ಸಂಪನ್ಮೂಲವನ್ನು ಮನಗಂಡು ಸಾಂಸ್ಕೃತಿಕ, ಆಧ್ಯಾತ್ಮಿಕ ಮತ್ತು ಪರಂಪರಾ ಪ್ರವಾಸೋದ್ಯಮಕ್ಕೆ ವಿಶೇಷವಾದ 12 ವಾರಗಳ ಮಾನದಂಡಿತ ಮಾರ್ಗದರ್ಶಕ ತರಬೇತಿ ಘೋಷಿಸಿದ್ದು, ಪ್ರವಾಸಿ ಮಾರ್ಗದರ್ಶಕರಿಗೆ ಅಂತಾರಾಷ್ಟ್ರೀಯ ಮಟ್ಟದ ತರಬೇತಿ, ರಾಷ್ಟ್ರೀಯ ಆತಿಥ್ಯ ಸಂಸ್ಥೆ ಮತ್ತು ಡೆಸ್ಟಿನೇಷನ್‌ಗಳ ಡಿಜಿಟಲ್ ಜ್ಞಾನ ಜಾಲ ಪ್ರವಾಸೋದ್ಯಮವನ್ನು ವೃತ್ತಿಪರ ಮತ್ತು ವಿಶ್ವಾಸಾರ್ಹ ಕ್ಷೇತ್ರವಾಗಿ ರೂಪಿಸುವ ಮಹತ್ವದ ಹೆಜ್ಜೆಗಳಾಗಿವೆ.

ಸೀಪ್ಲೇನ್ ವಿಯಾಬಿಲಿಟಿ ಗ್ಯಾಪ್ ಫಂಡಿಂಗ್, ಹೊಸ ಜಲಮಾರ್ಗಗಳ ಕಾರ್ಯಗತಗೊಳಿಕೆ ಮತ್ತು ಪ್ರಾದೇಶಿಕ ವಿಮಾನ ಸಂಪರ್ಕ ವಿಸ್ತರಣೆ-ಇವು ಕರಾವಳಿ ಮತ್ತು ಒಳನಾಡಿನ ದೂರದ ತಾಣಗಳಿಗೂ ಪ್ರವಾಸದ ಬಾಗಿಲು ತೆರೆಯುತ್ತವೆ. ಸ್ವಚ್ಛ ಮತ್ತು ಕಡಿಮೆ ವೆಚ್ಚದ ಸಾರಿಗೆಯ ಮೂಲಕ ಪ್ರವಾಸೋದ್ಯಮದ ಭೌಗೋಳಿಕ ವ್ಯಾಪ್ತಿ ವಿಸ್ತಾರಗೊಳ್ಳುತ್ತದೆ.

ಒಟ್ಟಿನಲ್ಲಿ 2026-27ರ ಕೇಂದ್ರ ಆಯವ್ಯಯ, ಪ್ರವಾಸೋದ್ಯಮ ದೃಷ್ಟಿಕೋನವು ತೆರಿಗೆ ಸುಲಭತೆ, ಯಾತ್ರಾ, ಪರಂಪರೆ ಅಭಿವೃದ್ಧಿ, ಪ್ರಕೃತಿ ಸಂರಕ್ಷಣೆ, ಕೌಶಲ್ಯ ನಿರ್ಮಾಣ ಮತ್ತು ಸಂಪರ್ಕ ಬಲವರ್ಧನೆ ಸೇರಿ ಈ ಎಲ್ಲವನ್ನು ಒಂದೇ ಚೌಕಟ್ಟಿನಲ್ಲಿ ಒಗ್ಗೂಡಿಸಿದೆ. ವಿಕಸಿತ ಭಾರತದ ದಾರಿಯಲ್ಲಿ ಪ್ರವಾಸೋದ್ಯಮವನ್ನು ಕೇಂದ್ರ ಬಿಂದುಗೊಳಿಸಿದ ಈ ಆಯವ್ಯಯ, ದೀರ್ಘಕಾಲೀನ ಬೆಳವಣಿಗೆಗೆ ದಿಟ್ಟ ದಿಕ್ಕು ತೋರಿಸಿದೆ.

**- ಕೆ.ರಾಧಾಕೃಷ್ಣ ಹೊಳ್ಳ, ಅಧ್ಯಕ್ಷ,** ಟ್ರಾವೆಲ್ ಮಾಲೀಕರ ಸಂಘ



---

# ಶಿಕ್ಷಣ, ಉದ್ಯೋಗ, ಉದ್ಯಮ ಒಗ್ಗೂಡಿಸುವತ್ತ ಬಜೆಟ್ ದೃಷ್ಟಿ

**“ ಶಿಕ್ಷಣ ಎಂದರೆ ಕೇವಲ ಪಾಠ ಪುಸ್ತಕಗಳಿಗೆ ಸೀಮಿತವಾದ ವಿಷಯವಲ್ಲ. ಅದು ಜೀವನೋಪಾಯ, ನವೋದ್ಯಮ ಮತ್ತು ರಾಷ್ಟ್ರ ನಿರ್ಮಾಣಕ್ಕೆ ಶಕ್ತಿಯಾದ ಸಾಧನವಾಗಿತ್ತು. ಪಿಇಎಸ್ ಸ್ಥಾಪನೆಯಾದ ದಿನದಿಂದಲೂ ಈ ನಿಟ್ಟಿನಲ್ಲಿಯೇ ಆಲೋಚನೆ ಮಾಡುವುದಷ್ಟೇ ಅಲ್ಲದೇ, ಶಿಕ್ಷಣ-ಉದ್ಯೋಗ-ಉದ್ಯಮ ಅಂಶಗಳ ನಡುವಿನ ಅಂತರವನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ನಿರಂತರವಾಗಿ ರೂಪಿಸಿಕೊಂಡಿದೆ.**

ಪಿಇಎಸ್ ಸಂಸ್ಥಾಪಕರು, ನನ್ನ ತಂದೆ ದಿ.ಎಂ.ಆರ್.ದೊರೆಸ್ವಾಮಿ ಅವರು ಶಿಕ್ಷಣ ಕೇವಲ ಪಠ್ಯ ಪುಸ್ತಕಗಳಿಗೆ ಸೀಮಿತವಾದ ವಿಷಯವಲ್ಲ ಎಂದು ಹೇಳುತ್ತಿದ್ದರು. ಈ ಮಾತು 2026-27ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಸ್ಪಷ್ಟವಾಗಿದೆ. ಅವರ ಮಾತಿನಂತೆ ಈ ಬಾರಿಯ ಬಜೆಟ್ ಶಿಕ್ಷಣ-ಉದ್ಯೋಗ-ಉದ್ಯಮವನ್ನು ಒಗ್ಗೂಡಿಸುವ ನಿಟ್ಟಿನಲ್ಲಿದೆ.

ಬಜೆಟ್‌ನಲ್ಲಿ ಶಿಕ್ಷಣವನ್ನು ಉದ್ಯೋಗ ಮತ್ತು ಉದ್ಯಮದೊಂದಿಗೆ ಜೋಡಿಸುವ ಸ್ಪಷ್ಟ ದೃಷ್ಟಿಕೋನವು ಅತ್ಯಂತ ಮಹತ್ವದ ಮತ್ತು ಭವಿಷ್ಯಮುಖಿ ಹೆಜ್ಜೆಯಾಗಿದೆ. ಈ ಆಶಯವು 1972ರಲ್ಲಿ ಸ್ಥಾಪನೆಯಾದ ಪಿಇಎಸ್ ಸಂಸ್ಥೆಯ ಮೂಲ ತತ್ವಗಳೊಂದಿಗೆ ಸಂಪೂರ್ಣವಾಗಿ ಹೊಂದಿಕೆಯಾಗುತ್ತದೆ.

ಶಿಕ್ಷಣ ಎಂದರೆ ಕೇವಲ ಪಾಠ ಪುಸ್ತಕಗಳಿಗೆ ಸೀಮಿತವಾದ ವಿಷಯವಲ್ಲ. ಅದು ಜೀವನೋಪಾಯ, ನವೋದ್ಯಮ ಮತ್ತು ರಾಷ್ಟ್ರ ನಿರ್ಮಾಣಕ್ಕೆ ಶಕ್ತಿಯಾದ ಸಾಧನವಾಗಿತ್ತು.

ಪಿಇಎಸ್ ಸ್ಥಾಪನೆಯಾದ ದಿನದಿಂದಲೂ ಈ ನಿಟ್ಟಿನಲ್ಲಿಯೇ ಆಲೋಚನೆ ಮಾಡುವುದಷ್ಟೇ ಅಲ್ಲದೇ, ಶಿಕ್ಷಣ-ಉದ್ಯೋಗ-ಉದ್ಯಮ ಅಂಶಗಳ ನಡುವಿನ ಅಂತರವನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ನಿರಂತರವಾಗಿ ರೂಪಿಸಿಕೊಂಡಿದೆ.

ಮೊದಲ ಮೂರು ದಶಕಗಳಲ್ಲಿ ಪಠ್ಯಕ್ರಮ ವಿನ್ಯಾಸ, ಬೋಧನಾ ವಿಧಾನ, ಅಧ್ಯಯನ ಪ್ರಕ್ರಿಯೆಗಳು ಮತ್ತು ಮೌಲ್ಯಮಾಪನ ವ್ಯವಸ್ಥೆಗಳನ್ನು ಉದ್ಯೋಗ ಮಾರುಕಟ್ಟೆಯ ಅಗತ್ಯಗಳಿಗೆ ಹೊಂದಾಣಿಕೆ ಗೊಳಿಸುವುದರ ಮೇಲೆ ಪ್ರಧಾನವಾಗಿ ಗಮನಹರಿಸಿತು. ಇದೀಗ ನಮ್ಮ ಆಲೋಚನೆಗೆ ತಕ್ಕಂತೆ ಕೇಂದ್ರ ಸರಕಾರ ಬಜೆಟ್‌ನಲ್ಲಿ ಕಾರ್ಯಯೋಜನೆ ರೂಪಿಸಿರುವುದು ಸಂಸ್ಥೆಗೆ ಹೆಮ್ಮೆಯ ಸಂಗತಿ.

ಶಿಕ್ಷಣ-ಉದ್ಯೋಗ-ಉದ್ಯಮ ತತ್ವಗಳು ರಾಷ್ಟ್ರೀಯ ನೀತಿಯಲ್ಲಿ ಸ್ಪಷ್ಟವಾಗಿ ಪ್ರತಿಫಲಿಸುತ್ತಿರುವುದು ಸಂತಸದ ಸಂಗತಿಯಾಗಿದೆ. ಪಿಇಎಸ್ ಸಂಸ್ಥೆ ತನ್ನ ಆರಂಭದಿಂದಲೂ ಶಿಕ್ಷಣವನ್ನು ಉದ್ಯೋಗ ಮತ್ತು ಉದ್ಯಮದೊಂದಿಗೆ ಸಂಯೋಜಿಸುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತ ಬಂದಿದೆ. ಮುಂದಿನ ಒಂದು ದಶಕದಲ್ಲಿ, ಪಿಇಎಸ್ ತನ್ನ ಗಮನವನ್ನು ಉದ್ಯಮಶೀಲತೆಯನ್ನು ಉತ್ತೇಜಿಸುವ ದಿಕ್ಕಿನಲ್ಲಿ ವಿಸ್ತರಿಸಿತು.

ಇದರ ಭಾಗವಾಗಿ ನವೋದ್ಯಮ ಮತ್ತು ಉದ್ಯಮಶೀಲತೆ ಕೇಂದ್ರ ಮತ್ತು ಪಿಇಎಸ್ ವೆಂಚರ್ ಲ್ಯಾಬ್‌ಗಳನ್ನು ಸ್ಥಾಪಿಸಲಾಯಿತು. ಇವು ವಿದ್ಯಾರ್ಥಿಗಳಿಗೆ ತಮ್ಮ ಆಲೋಚನೆಗಳನ್ನು ಯಶಸ್ವಿ ಉದ್ಯಮಗಳಾಗಿ ರೂಪಿಸುವ ವೇದಿಕೆಯನ್ನು ಒದಗಿಸಿವೆ.



2026-27ರ ಬಜೆಟ್‌ನ ಪ್ರಮುಖ ಅಂಶವೆಂದರೆ ಕೇವಲ ಅನುದಾನ ಹಂಚಿಕೆಗೆ ಸೀಮಿತವಾಗದೆ. ಫಲಿತಾಂಶ ಆಧಾರಿತ ವ್ಯವಸ್ಥೆಯತ್ತ ನಡೆದಿರುವ ಬದಲಾವಣೆ. ಶಿಕ್ಷಣವನ್ನು ನೇರವಾಗಿ ಉದ್ಯೋಗ ಮತ್ತು ಉದ್ಯಮ ಸೃಷ್ಟಿಯೊಂದಿಗೆ ಸಂಪರ್ಕಿಸುವ ಈ ಕ್ರಮವು ಭವಿಷ್ಯಸಿದ್ಧ, ಪ್ರಾಯೋಗಿಕ ಮತ್ತು ಬೆಳವಣಿಗೆ ಮುಖಿ ಶಿಕ್ಷಣ ವ್ಯವಸ್ಥೆಯತ್ತ ಸಾಗುವ ಸಂಕೇತವಾಗಿದೆ.

ಈ ಬಜೆಟ್, ಶಿಕ್ಷಣವನ್ನು ಭಾರತದ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯ ಮೂಲಸ್ತಂಭವೆಂದು ಪುನರುಚ್ಚರಿಸಿದೆ. ಮೂಲಸೌಕರ್ಯ ಅಭಿವೃದ್ಧಿ, ಸಮಾವೇಶ ಮತ್ತು ಭವಿಷ್ಯಮುಖಿ ಕೌಶಲ್ಯ ನಿರ್ಮಾಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಪಿಇಎಸ್ ಸಂಸ್ಥೆ ಕಳೆದ ಐದು ದಶಕಗಳಿಂದಲೇ ಈ ದಿಕ್ಕಿನಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ಹೆಮ್ಮೆಯಿಂದ ಉಲ್ಲೇಖಿಸಬಹುದು.

ಶಿಕ್ಷಣವನ್ನು ಉದ್ಯೋಗ ಮತ್ತು ಉದ್ಯಮದೊಂದಿಗೆ ಅರ್ಥಪೂರ್ಣವಾಗಿ ಜೋಡಿಸಿದಾಗ ಅದು ರಾಷ್ಟ್ರದ ಪ್ರಗತಿಗೆ ಅತ್ಯಂತ ಶಕ್ತಿಶಾಲಿ ಚಾಲಕ ಶಕ್ತಿಯಾಗುತ್ತದೆ ಎಂಬ ನಂಬಿಕೆಯನ್ನು ಕೇಂದ್ರ ಬಜೆಟ್ 2026-27 ಮತ್ತಷ್ಟು ದೃಢಪಡಿಸಿದೆ.


**- ಪ್ರೊ.ಜವಹರ್ ದೊರೆಸ್ವಾಮಿ, ಕುಲಪತಿ,** ಪಿಇಎಸ್ ವಿಶ್ವವಿದ್ಯಾಲಯ

---

## ಶ್ರೀವಾಣಿ

ಓರ್ವ ಸಿರಿವಂತನ ಮನೆಯ ಹಿತ್ತಲದ ಗಿಡದಲ್ಲಿ ಕಾಗೆಯು ಒಂದು ಮುಳ್ಳಿನ ಗೂಡನ್ನು ಕಟ್ಟಿ ನಾಲ್ಕು ತತ್ತಿ ಇಟ್ಟು ಮಕ್ಕಳ ಬರುವಿಗಾಗಿ ದಾರಿ ಕಾಯುತ್ತಿತ್ತು. ಅದನ್ನು ನೋಡಿದ ಸಿರಿವಂತನು ಕಾಗೆಗೆ ಕೇಳಿದ ನನ್ನ ಮನೆ ನೋಡು ಎಷ್ಟು ಭವ್ಯವಾಗಿದೆ. ನಿನ್ನ ಈ ಮುಳ್ಳಿನ ಗೂಡಿಗೆ ಯಾರಾದರೂ ಮನೆ ಎನ್ನುತ್ತಾರೆಯೇ? ಕಾಗೆ ಹೇಳಿತು. ಸಿರಿವಂತರೆ, ನನ್ನ ಮನೆ ಮುಳ್ಳಿನದಿರಬಹುದು ಆದರೆ ಅದನ್ನು ನಾನೇ ಪರಿಶ್ರಮದಿಂದ ಕಟ್ಟಿದ್ದೇನೆ. ನಿಮ್ಮ ಮನೆ ನೀವು ಕಟ್ಟಿದ್ದಲ್ಲ, ಯಾರೋ ಕಟ್ಟಿದ ಮನೆಗೆ ನನ್ನ ಮನೆ ಎನ್ನುತ್ತಿದ್ದೀರಿ ಕಾಗೆಯ ಮಾತು ಕೇಳಿ ಸಿರಿವಂತನ ಕಣ್ಣು ತೆರೆಯಿತು. ಕಾಗೆಗೆ ಇರುವ ವಿಶಾಲಭಾವ ಸಂತೃಪ್ತಿ ನನಗೆ ಬರುವುದು ಯಾವಾಗ ಎಂದು ಚಿಂತನೆಗೆ ತೊಡಗಿದ.

ನಮ್ಮ ಮಗು ಪರೀಕ್ಷೆಯಲ್ಲಿ ನೂರಕ್ಕೆ 90 ಅಂಕ ಗಳಿಸಿದೆ ಎಂದು ಕೇಳಿದಾಗ ನಮಗೆ ಸಂತಸವಾಗುತ್ತದೆ. ಆದರೆ ನೆರೆಮನೆಯವರ ಮಗು ನೂರಕ್ಕೆ 95 ಗಳಿಸಿದೆ ಎಂದು ಕೇಳಿದ ತಕ್ಷಣ ನಮ್ಮ ಸಂತಸ ಮಾಯವಾಗಿ ಬಿಡುತ್ತದೆ. ಆಶೆ, ಅಮಿಷಗಳನ್ನು ಕಳೆದುಕೊಂಡು ಯಾವಾಗ ಎಲ್ಲರೂ ನನ್ನವರು, ಎಲ್ಲವೂ ನನ್ನದು ಎಂಬ ಭಾವವು ಒಡಮೂಡುತ್ತದೆಯೋ ಅದೇ ಕ್ಷಣ ನಮ್ಮ ಮನ ಘನಮನ ಆಗುತ್ತದೆ. ಇದುವೆ ಸದ್ಗುರುಗಳು ತೋರುವ ದಿವ್ಯ ಸಾಧನಾ ಪಥ.



**-ಸಂತೋಷ್ ಕುಮಾರ್** ಸುರತ್ಕಲ್

---

## ನ್ಯಾಯಾಲಯ

ಸರಕಾರದಿಂದ ಅನುದಾನವನ್ನು ಪಡೆದುಕೊಂಡು ನ್ಯಾಯಾಲಯದ ಸಂಕಿರಣವನ್ನು ಕಟ್ಟುವುದಕ್ಕೆ ಟೆಂಡರ್ ಕರೆಯಲಾಗಿತ್ತು. ಟೆಂಡರ್ ಪಡೆದುಕೊಂಡಂತಹ ಒಂದು ತಂಡ ತುಂಬಾ ತ್ವರಿತಗತಿಯಲ್ಲಿ ನ್ಯಾಯಾಲಯದ ಸಂಕಿರಣವನ್ನು ನಾಲ್ಕೈದು ಅಂತಸ್ತುಗಳವರೆಗೆ ಏರಿಸಿ ಬಣ್ಣ ಹಚ್ಚಿ ಉದ್ಘಾಟನೆಗೆ ಸಿದ್ಧಗೊಳಿಸಿತು. ವಿವಿಧ ವಿನ್ಯಾಸದ ಕೊಠಡಿಗಳು ವಿಶಾಲವಾದ ಪಾರ್ಕಿಂಗ್ ವ್ಯವಸ್ಥೆ ಕುಡಿಯುವ ನೀರಿನ ವ್ಯವಸ್ಥೆ ಬಂದ ಪ್ರತಿಯೊಬ್ಬರಿಗೂ ಎಲ್ಲಾ ಕಡೆಗೂ ಸಾಗುವುದಕ್ಕೆ ಲಿಫ್ಟಿನ ವ್ಯವಸ್ಥೆ ವಿವಿಧ ಮಳಿಗೆಗಳೆಲ್ಲವನ್ನ ತೆರೆದು ಅದ್ಭುತವಾಗಿ ನೆಲದಿಂದ ಮೇಲಿದ್ದು ನಿಂತಿತ್ತು. ನೋಡುಗರೆಲ್ಲರೂ ಒಂದು ಸಲ ಕಣ್ಣು ಹಾಯಿಸಿ ಅದ್ಭುತವಾದ ನ್ಯಾಯಾಲಯವನ್ನು ಗಮನಿಸುವ ಹಾಗೆಯೂ ಆಗಿತ್ತು. ಆದರೆ ಆ ನ್ಯಾಯಾಲಯದೊಳಗೆ ಮೆಟ್ಟಿಲು ಹತ್ತಿ ದೂರನ್ನು ದಾಖಲಿಸಿದ ಸಾವಿರಗಟ್ಟಲೆ ಫೈಲ್‌ಗಳು ಹಾಗೆ ಉಳಿದುಬಿಟ್ಟಿದ್ದವು. ಕಟ್ಟಡವನ್ನ ಕಟ್ಟುವ ತ್ವರಿತ ಗತಿ ನ್ಯಾಯವನ್ನು ಕೊಡುವುದರಲ್ಲಿ ಕಂಡು ಬರಲಿಲ್ಲ . ತ್ವರಿತಗತಿಯಲ್ಲಿ ವಿಳಂಬವಿಲ್ಲದೆ ನ್ಯಾಯವು ದೊರಕುವ ಹಾಗಾಗಿದ್ದರೆ ಹಲವು ತಪ್ಪುಗಳು ಈಗ ಆಗದೆ ಉಳಿದಿರುತ್ತಿತ್ತು. ಆಗದಿರುವ ಸಣ್ಣ ತಪ್ಪಿಗೆ ದೂರನ್ನ ದಾಖಲಿಸಿಕೊಂಡು ಇನ್ನೂ ಹಲವು ಕಟ್ಟಡಗಳನ್ನ ಬದಲಾಯಿಸಿ ಹೊಸ ಹೊಸ ಕಟ್ಟಡಗಳಿಗೆ ನ್ಯಾಯಾಲದ ಸಂಕೀರ್ಣ ಬದಲಾದರೂ ನ್ಯಾಯ ಸಿಗದೇ ಇದ್ದುದನ್ನ ಕುಳಿತುಕೊಂಡು ಯೋಚಿಸಿ ಮೌನವಾಗಿ ಬಿಟ್ಟ ರಾಜೇಶ. ಆತನ ಮುಖಚರ್ಯೆಯೇ ಆತ ಅನುಭವಿಸಿದ ನೋವನ್ನ ಹೇಳುತ್ತಿತ್ತು.




**- ಧೀರಜ್** ಬೆಳ್ಳಾರೆ

## ಸಿಎಂ ಬದಲಾವಣೆ ಚರ್ಚೆ ಅನಗತ್ಯ: ದಿನೇಶ್ ಗುಂಡೂರಾವ್

• ಪ್ರಜೋದಯ ವರದಿ



**ಬೀದರ್:** ಮುಖ್ಯಮಂತ್ರಿ ಯಾರೆಂಬುದು ಪಕ್ಷದ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ. ಸ್ವತಃ ಮುಖ್ಯಮಂತ್ರಿಯವರೇ ಈ ವಿಷಯ ಹೇಳಿದ್ದಾರೆ. ಅವರ ಕೆಲವು ಬೆಂಬಲಿಗರು ಹೇಳಿರಬಹುದು. ಆದರೆ, ಯಾರೋ ಏನೋ ಹೇಳಿಕೆ ಕೊಟ್ಟರೆ ಬದಲಾಗುವುದಿಲ್ಲವೆಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ಮುಖ್ಯ ಮಂತ್ರಿಯಾರಾಗುತ್ತಾರೆ ಎನ್ನುವುದರ ಬಗ್ಗೆ ಚರ್ಚೆ ನಡೆಸುವ ಅಗತ್ಯವಿಲ್ಲ. ಕೆಲವರ ಹೇಳಿಕೆಗಳಿಂದ ಈ ರೀತಿಯ ಚರ್ಚೆಗಳು ಆಗುತ್ತಿರುತ್ತವೆ. ಆದರೆ, ಇದೆಲ್ಲ ಅನಗತ್ಯ. ಈ ಬಗ್ಗೆ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ಅದರ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕೂಡ ಈಗಾಗಲೇ ಹೇಳಿದ್ದಾರೆಂದರು.

ಮುಖ್ಯಮಂತ್ರಿ ಮಗ ಯಾವುದೋ ಮಾಧ್ಯಮದಲ್ಲಿ ಹೇಳಿದ್ದಾರೆ. ಆದರೆ, ಯಾರೋ ಒಬ್ಬರ ತೀರ್ಮಾನವಲ್ಲ. ಪಕ್ಷದ ವರಿಷ್ಟರು ತೀರ್ಮಾನ ತೆಗೆದು ಕೊಳ್ಳುತ್ತಾರೆ. ಎಲ್ಲರೂ ಹೈಕಮಾಂಡ್ ಒಪ್ಪುತ್ತಾರೆ. ಪಕ್ಷದಲ್ಲಿ ಗುಂಪುಗಾರಿಕೆ, ಭಿನ್ನಮತ ಇಲ್ಲ. ಅಧಿವೇಶನದಲ್ಲಿ ಒಗ್ಗಟ್ಟಾಗಿ ಎದುರಿಸಿದ್ದೇವೆ. ಪಕ್ಷದ ಹಿತ ದೃಷ್ಟಿಯಿಂದ ಹೈಕಮಾಂಡ್ ಏನು ಮಾಡಬೇಕೋ ಅದನ್ನು ಮಾಡುತ್ತದೆ. ಕೆಲವು ಊಹಾಪೋಹಗಳು ಇರುತ್ತವೆ. ಆಯವ್ಯಯದ ನಂತರ ಸಚಿವ ಸಂಪು ಟದ ಪುನರ್ ರಚನೆ ಖಂಡಿತವಾಗಿ ಆಗುತ್ತದೆ. ಆಗಲ್ಲ ಎಂದು ನಾನು ಹೇಳಲ್ಲ. ಆದರೆ, ಯಾವಾಗ ಆಗುತ್ತದೆಂದು ಹೇಳಕ್ಕಾಗಲ್ಲ ಎಂದು ಪ್ರತಿಕ್ರಿಯಿಸಿದರು.

# ರಷ್ಯಾದಿಂದ ತೈಲ ಖರೀದಿ ಸ್ಥಗಿತಕ್ಕೆ ಮುಂದಾದ ಭಾರತ

## ಅಮೇರಿಕಾದೊಂದಿಗೆ ಒಪ್ಪಂದ ಹಿನ್ನಲೆ | ಕೇಂದ್ರದ ಸಲಹೆಗೆ ಕಾಯುತ್ತಿವೆ ಕಂಪನಿಗಳು

• ಪ್ರಜೋದಯ ವರದಿ



**ನವದೆಹಲಿ:** ಭಾರತದ ತೈಲ ಸಂಸ್ಕರಣಾ ಘಟಕಗಳು ರಷ್ಯಾದಿಂದ ತೈಲ ಖರೀದಿಯನ್ನು ತಪ್ಪಿಸುತ್ತಿದ್ದು, ದೀರ್ಘ ಕಾಲ ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಲಿದ್ದಾರೆ ಎಂದು ತಿಳಿದುಬಂದಿದೆ.

ಈ ನಿರ್ಧಾರ ಅಮೇರಿಕಾದೊಂದಿಗೆ ವ್ಯಾಪಾರ ಒಪ್ಪಂದಕ್ಕೆ ಸಹಾಯ ಮಾಡಲಿದೆಯೆಂದು ನಂಬಲಾಗಿದೆ. ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಹಾಗು ರಿಲಯನ್ಸ್ ಇಂಡಸ್ಟ್ರೀಸ್ ಮುಂತಾದ ಕಂಪನಿ ಗಳು ಮಾರ್ಚ್ ಹಾಗು ಏಪ್ರಿಲ್‌ನಲ್ಲಿ ರವಾನೆಯಾಗಬೇಕಿದ್ದ ರಷ್ಯಾದ ತೈಲ ಖರೀದಿ ನಿಲ್ಲಿಸಿವೆಯೆಂದು ಸಂಸ್ಕರಣಾ ಕಂಪನಿಗಳನ್ನು ಸಂಪರ್ಕಿಸಿದ ವ್ಯಾಪಾರಿಯೊಬ್ಬರು ತಿಳಿಸಿದ್ದಾರೆ.

ಈ ಕಂಪನಿಗಳು ಈಗಾಗಲೇ ರಷ್ಯಾದಿಂದ ತೈಲ ಖರೀದಿ ಮಾಡಿದ್ದು, ಮಾರ್ಚ್‌ನಲ್ಲಿ ರವಾನೆಯಾಗಬೇಕಿತ್ತು. ಹೆಚ್ಚಿನ ಸಂಸ್ಕರಣಾಗಾರರು ರಷ್ಯಾದ ಕಚ್ಚಾ ತೈಲ ಖರೀದಿಸುವುದನ್ನು ನಿಲ್ಲಿಸಿದ್ದಾರೆ. ಈ ಬಗ್ಗೆ ಮಾಹಿತಿ ಬಯಸಿ ಕಂಪನಿಗಳು ಹಾಗು ಇಂಧನ ಸಚಿವಾಲಯವನ್ನು ಸಂಪರ್ಕಿಸಿದರೂ, ಪ್ರತಿಕ್ರಿಯಿಸಲು ನಿರಾಕರಿಸಿದ್ದಾರೆ. ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶಕ್ಕೆ ಇಂಧನ ಭದ್ರತೆಯನ್ನು ಖಚಿತಿಪಡಿಸಿಕೊಳ್ಳಲು ಮಾರುಕಟ್ಟೆ ಸ್ಥಿತಿಗತಿ ಹಾಗು ಬದಲಾಗುತ್ತಿರುವ ಅಂತಾರಾಷ್ಟ್ರೀಯ ವಿದ್ಯಮಾನಗಳಿಗೆ ಅನುಗುಣವಾಗಿ ತೈಲ ಖರೀದಿಗೆ ವಿವಿಧ ಮೂಲಗಳನ್ನು ಆಶ್ರಯಿಸುವುದು ನಮ್ಮ ಕಾರ್ಯತಂತ್ರದ ಪ್ರಮುಖ ಅಂಶವಾಗಿದೆ ಎಂದು ವಿದೇಶಾಂಗ ಇಲಾಖೆಯ ವಕ್ತಾರರೊಬ್ಬರು ತಿಳಿಸಿದ್ದಾರೆ.

ಭಾರತ ಹಾಗು ಅಮೇರಿಕಾ ನಡುವಣ ವ್ಯಾಪಾರ ಒಪ್ಪಂದ ಚೌಕಟ್ಟಿನಲ್ಲಿ ರಷ್ಯಾ ತೈಲ ಖರೀದಿ ಬಗ್ಗೆ ಯಾವುದೇ ಉಲ್ಲೇಖ ಇಲ್ಲದಿದ್ದರೂ, ರಷ್ಯಾದಿಂದ ತೈಲ ಖರೀದಿ ಮಾಡಿದ್ದಕ್ಕೆ ಭಾರತದ ಮೇಲೆ ಶೇ.25ರಷ್ಟು ಸುಂಕ ಹೇರಿದ್ದಾಗಿ ಹೇಳಿದ್ದರು. ಅಲ್ಲದೆ, ಭಾರತವು ಮಹತ್ವದ ಕ್ರಮಗಳನ್ನು ತೆಗೆದುಕೊಂಡಿದೆ ಮತ್ತು ಮಾಸ್ಕೋದಿಂದ ನೇರ ಅಥವಾ ಪರೋಕ್ಷವಾಗಿ ತೈಲ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಲು ಬದ್ಧತೆ ವ್ಯಕ್ತಪಡಿಸಿದೆ ಎಂದು ಟ್ರಂಪ್ ವ್ಯಾಪಾರ ಚೌಕಟ್ಟು ಘೋಷಣೆಯಾದ ಬಳಿಕ ಹೇಳಿದ್ದರು.

ರಷ್ಯಾದಿಂದ ತೈಲ ಆಮದು ನಿಲ್ಲಿಸುವ ಬಗ್ಗೆ ಭಾರತದಿಂದ ಯಾವುದೇ ಅಧಿಕೃತ ಘೋಷಣೆಯಾಗಿಲ್ಲ. 2022ರಲ್ಲಿ ಉಕ್ರೇನ್ ಜೊತೆಗೆ ರಷ್ಯಾ ಯುದ್ಧ ಆರಂಭಿಸಿದ ಬಳಿಕ, ಭಾರತವು ರಷ್ಯಾದಿಂದ ಕಡಿಮೆ ದರದಲ್ಲಿ ತೈಲ ಆಮದು ಮಾಡಿ ಕೊಳ್ಳುತ್ತಿತ್ತು. ತೈಲದ ಆದಾಯವನ್ನು ಉಕ್ರೇನ್ ಮೇಲಿನ ಯುದ್ಧಕ್ಕೆ ಬಳಸುತ್ತಿದೆ ಎಂದು ಹಲವು ರಾಷ್ಟ್ರಗಳು ಬಹಿಷ್ಕರಿಸಿ ದ್ದರಿಂದ ಭಾರತದ ನಿರ್ಧಾರಕ್ಕೆ ಪಾಶ್ಚಿಮಾತ್ಯ ದೇಶಗಳಿಂದ ವಿರೋಧ ಕೂಡ ವ್ಯಕ್ತವಾಗಿತ್ತು.

ಭಾರತದ ನಯಾರಾ ಕಂಪನಿಯು ರಷ್ಯಾದ ತೈಲವನ್ನೇ ನೆಚ್ಚಿಕೊಂಡಿದ್ದು, ನಿತ್ಯ 4 ಲಕ್ಷ ಬ್ಯಾರೆಲ್ ತೈಲವನ್ನು ಸಂಸ್ಕರಿಸುತ್ತದೆ. ಕಳೆದ ಜುಲೈನಲ್ಲಿ ಐರೋಪ್ಯ ಒಕ್ಕೂಟವು ನಯಾರಾಕ್ಕೆ ನಿರ್ಬಂಧ ಹೇರಿದ್ದರಿಂದ ಬೇರೆ ಕಂಪನಿಗಳೂ ಕೂಡ ತೈಲ ಪೂರೈಕೆಯನ್ನು ನಿಲ್ಲಿಸಿದ್ದವು. ಹೀಗಾಗಿ ನಯಾರಾಗೆ ರಷ್ಯಾ ತೈಲ ಖರೀದಿಗೆ ಅನುಮತಿ ನೀಡಬಹುದು ಎಂದು ಮೂಲಗಳು ಹೇಳಿವೆ. ಸದ್ಯ ನಯಾರಾದ ಸಂಸ್ಕರಣಾ ಘಟಕಗಳು ಬಹುದಿನಗಳಿಂದ ನಿರ್ವಹಣೆಯಲ್ಲಿರುವುದರಿಂದ ಏಪ್ರಿಲ್‌ನಲ್ಲಿ ರಷ್ಯಾದಿಂದ ತೈಲ ಖರೀದಿ ಮಾಡುವುದಿಲ್ಲ ಎಂದು ಈ ಬಗ್ಗೆ ಮಾಹಿತಿ ಇರುವವರು ಹೇಳಿದ್ದಾರೆ. ಆದರೆ, ಈ ಬಗ್ಗೆ ನಯಾರಾದಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಕೇಂದ್ರ ಸರ್ಕಾರ ಸಲಹೆ ನೀಡಿದರೆ ಮಾತ್ರ ರಷ್ಯಾದಿಂದ ತೈಲ ಖರೀದಿ ಆದೇಶ ನೀಡಲು ತೈಲ ಕಂಪನಿಗಳು ಯೋಚಿಸಿವೆ ಎಂದು ಮೂಲಗಳು ತಿಳಿಸಿವೆ.

# ಪ್ರಾಮಾಣಿಕ ಪ್ರಯತ್ನಕ್ಕೆ ಪ್ರತಿಫಲ ಖಚಿತ

• ಪ್ರಜೋದಯ ವರದಿ



**ಹಾಸನ:** ಶ್ರಮ ಹಾಗು ಪ್ರಾಮಾಣಿಕ ದಾರಿಯಲ್ಲಿ ಸಾಗಿದರೆ ಸಕಾರಾತ್ಮಕ ಪ್ರತಿಫಲ ಖಂಡಿತ ಸಿಗುತ್ತದೆಂದು ಸ್ಕಾಲರ್ಸ್ ಅಂತಾರಾಷ್ಟ್ರೀಯ ಶಾಲೆಯ ಆಡಳಿತಾಧಿ ಕಾರಿ ಡಾ.ಹೆಚ್.ಎನ್. ಚಂದ್ರಶೇಖರ್ ಅವರು ಹೇಳಿದರು.

ಸ್ಕಾಲರ್ಸ್ ಶಾಲೆಯಲ್ಲಿ ಏರ್ಪಡಿಸಿದ್ದ ತಾಯಂದಿರಿಗಾಗಿ ರಂಗೋಲಿ ಸ್ಪರ್ಧೆ ಮತ್ತು ಮಕ್ಕಳಿಗಾಗಿ ಸವಿರುಚಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಔಪಚಾರಿಕ ಶಿಕ್ಷಣ ಮಾತ್ರ ಶಿಕ್ಷಣವಲ್ಲ, ಬೇರೆಯವರೊಂದಿಗಿನ ಮಾತು, ಸಂಸ್ಕಾರ, ನಡವಳಿಕೆ ಹಾಗು ವ್ಯವಹಾರ ಜ್ಞಾನವೂ ಶಿಕ್ಷಣವೇ ಆಗಿದೆಯೆಂದರು.

ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಜವಾಬ್ದಾರಿ ಹೆಚ್ಚಿದೆ. ಮಕ್ಕಳನ್ನು ಕೇವಲ ಅಂಕ ಗಳಿಕೆಯ ಯಂತ್ರಗಳನ್ನಾಗಿಸದೆ ಅವರಲ್ಲಿ ಮಾನವೀಯ ಮೌಲ್ಯ, ಸಂಸ್ಕಾರ ಕಲಿಸ ಬೇಕು. ಪಠ್ಯ ಪುಸ್ತಕ ಅಧ್ಯಯನವಷ್ಟೇ ಜ್ಞಾನಾರ್ಜನೆಯಲ್ಲ ಎಂದರು.

ತಾಯಂದಿರು ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ಸಂಭ್ರಮಿಸಿದರು. ವಿಜೇತರಿಗೆ ಬಹು ಮಾನ ವಿತರಿಸಲಾಯಿತು. ಶಾಲೆಯ ಆವರಣದಲ್ಲಿ ಮಕ್ಕಳಿಗಾಗಿ ಸವಿರುಚಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳು ವಿಧ ವಿಧವಾದ ತಿನಿಸುಗಳನ್ನು ಮಾರಾಟ ಮಾಡುವುದರ ಮೂಲಕ ಸ್ವ ಅನುಭವ ಪಡೆದರು. ಸಂಸ್ಥೆಯ ಕಾರ್ಯದರ್ಶಿ ಮಮತಾ ಚಂದ್ರಶೇಖರ್, ಸಿಬ್ಬಂದಿ ಹಾಗು ಪೋಷಕರು ಹಾಜರಿದ್ದರು.

# ಮನೆಗಳ್ಳನ ಬಂಧನ: 140 ಗ್ರಾಂ ಚಿನ್ನಾಭರಣ ವಶ



• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ನಾಗೇನಹಳ್ಳಿಯಲ್ಲಿ ಮನೆಗಳ್ಳತನ ನಡೆಸಿದ್ದ ಆರೋಪಿಯನ್ನು ಬಂಧಿಸಿರುವ ಪೊಲೀಸರು 140 ಗ್ರಾಂ ತೂಕದ ಚಿನ್ನಾಭರಣ ವಶಕ್ಕೆ ಪಡೆದಿದ್ದಾರೆ.

ತಾಲ್ಲೂಕಿನ ಸ್ಕೂಲ್‌ಗರ್ಜೆ ಗ್ರಾಮದ ಯೋಗೀಶ್ ಬಂಧಿತ ಆರೋಪಿ. ಅರೇಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ನಾಗೇನಹಳ್ಳಿಯ ಹನುಮೇಗೌಡ ಎಂಬುವವರ ಮನೆಯಲ್ಲಿ ಕಳ್ಳತನ ನಡೆದಿತ್ತು. ಹಳೇಬೀಡು ಪೊಲೀಸ್ ವೃತ್ತ ನಿರೀಕ್ಷಕ ಬಿ.ಸಿ.ಜಗದೀಶ್, ಪಿಎಸ್ಐ ಶೋಭಾ, ಸಿಬ್ಬಂದಿ ಪೃಥ್ವಿ, ಸುಪ್ರೀತ್, ಹೇಮಾಕಾಂತ್, ಫಕ್ರುದ್ದೀನ್, ಸಮೀನ್‌ತಾಜ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

# ಕನ್ನಡ ನಾಡನ್ನು ಕೈಲಾಸವಾಗಿಸಿದ ಜಿ.ಎಸ್. ಶಿವರುದ್ರಪ್ಪ

• ಪ್ರಜೋದಯ ವರದಿ



**ಹಾಸನ:** ಬಸವಾದಿ ಶರಣರ ವಚನ ಸಾಹಿತ್ಯವನ್ನು ಸಂರಕ್ಷಿಸಿ ಕನ್ನಡ ನಾಡನ್ನು ಕೈಲಾಸ ಮಾಡಿದ ಕೀರ್ತಿ ಹಿರಿಯ ಸಾಹಿತಿ ಡಾ.ಜಿ.ಎಸ್. ಶಿವರುದ್ರಪ್ಪ ಅವರಿಗೆ ಸಲ್ಲುತ್ತದೆಂದು ಕರಡಿಗವಿ ಮಠದ ಶ್ರೀ ಶಿವಶಂಕರ ಶಿವಯೋಗಿ ಸ್ವಾಮೀಜಿ ಹೇಳಿದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಕದಳಿ ಮಹಿಳಾ ವೇದಿಕೆಯಿಂದ ತಣ್ಣೀರುಹಳ್ಳ ಮಠದಲ್ಲಿ ಏರ್ಪಡಿಸಿದ್ದ ಡಾ.ಜಿ.ಎಸ್.ಶಿವರುದ್ರಪ್ಪ ಅವರ 100ನೇ ವರ್ಷದ ಜನ್ಮ ದಿನಾಚರಣೆಯಲ್ಲಿ ಮಾತನಾಡಿದ ಅವರು, ಯುವ ಜನಾಂಗ ಹಾಗು ಎಲ್ಲರೂ ವಚನ ಸಾಹಿತ್ಯವನ್ನು ಅಧ್ಯಯನ ಮಾಡುವ ಮೂಲಕ ಮಾನವೀಯತೆಯನ್ನು ಮೈಗೂಡಿಸಿಕೊಳ್ಳಬೇಕೆಂದರು.

ಶ್ರೇಷ್ಠ ವಚನ ಸಾಹಿತ್ಯವನ್ನು ಶಾಲಾ ಮಕ್ಕಳಿಗೆ ತಲುಪಿಸಿದ ಕೀರ್ತಿ ಶಿವರುದ್ರಪ್ಪ ಅವರಿಗೆ ಸಲ್ಲುತ್ತದೆ. ಇಂತಹ ಆದರ್ಶ ವ್ಯಕ್ತಿಗಳ ಜೀವನ ದರ್ಶನ ಇಂದಿನ ಯುವಕರಿಗೆ ಮಾದರಿಯಾಗಬೇಕೆಂದರು. ಸಂಕಾಲಪುರ ಮಠದ ಶ್ರೀ ಶಾಂತವೀರ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, 12ನೇ ಶತಮಾನದ ಶರಣರ ವಚನಗಳನ್ನು ಜನಮಾನಸಕ್ಕೆ ತಲುಪಿ ಸಲು ಶಿವರುದ್ರಪ್ಪ ಸಾಕಷ್ಟು ಶ್ರಮ ವಹಿಸಿದ್ದಾರೆಂದರು.

ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಟ್ಟಾಯ ಶಿವಕುಮಾರ್ ಅವರು ಮಾತ ನಾಡಿ, ಕೇವಲ ವಚನ ಸಾಹಿತ್ಯವಷ್ಟೇ ಅಲ್ಲದೆ ಕನ್ನಡ ನಾಡು, ನುಡಿ, ಸಾಹಿತ್ಯದತ್ತ ಆಸಕ್ತಿ ಬೆಳೆಸಿಕೊಂಡ ಶಿವರುದ್ರಪ್ಪ ಅವರು ನಾಡು-ನುಡಿಗೆ ಜೀವನ ಸಮರ್ಪಿಸಿದ್ದರೆಂದರು.

ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಎಂ.ಎನ್.ಕುಮಾರಸ್ವಾಮಿ ಅವರು ಮಾತನಾಡಿ, ಶರಣರ ವಿಚಾರ ಧಾರೆಗಳು ಸರ್ವಕಾಲಕ್ಕೂ ಪ್ರಸ್ತುತ. ಅಳಿಯುತ್ತಿದ್ದ ವಚನ ಸಾಹಿತ್ಯವನ್ನು ಉಳಿಸಿ ಬೆಳೆಸಿ ಭವಿಷ್ಯದ ಪೀಳಿಗೆಗೆ ಉಳಿಸಿದ್ದಾರೆ. ಅದನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಸುತ್ತೂರು ಜಗದ್ಗುರು ಡಾ.ಶ್ರೀರಾಜೇಂದ್ರ ಸ್ವಾಮೀಜಿ ಅವರು ಶರಣ ಸಾಹಿತ್ಯ ಪರಿಷತ್ ರಚಿಸಿ ನಾಡಿನಾದ್ಯಂತ ಮೌಲಿಕ ಕಾರ್ಯಕ್ರಮ ರೂಪಿಸುತ್ತಿದೆಯೆಂದರು. ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಉಪಾಧ್ಯಕ್ಷ ನಂಜುಂಡಸ್ವಾಮಿ, ತಾಲ್ಲೂಕು ಅಧ್ಯಕ್ಷ ಲೋಹಿತ್ ಕೌಡಹಳ್ಳಿ, ರಾಜಕುಮಾರ್, ಧನಂಜಯ್, ಗಣೇಶ್, ಎಂ.ಸಿ. ರಾಧಿಕಾ, ಶಾರದಾ ಗುರುಮೂರ್ತಿ, ಮೀನಾಕ್ಷಿ ಇದ್ದರು.

# ಸದ್ವಿಚಾರಗಳಿಂದ ಜೀವನ ಪ್ರಾಪ್ತಿ : ರೇಣುಕಾ ಸ್ವಾಮೀಜಿ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಮನಸ್ಸು ಪವಿತ್ರತೆ ಹಾಗೂ ಭಕ್ತಿಯಿಂದ ಕೂಡಿದ್ದರೆ ಬದುಕಿನಲ್ಲಿ ಉತ್ತಮ ಫಲಗಳ ಜೊತೆಗೆ ಮುಕ್ತಿಯು ಪ್ರಾಪ್ತಿಯಾಗಲಿದೆ ಎಂದು ವೈದ್ಯನಾಥಪುರ ಶ್ರೀ ರೇಣುಕಾ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಗುಳ್ಳಹಳ್ಳಿ ಗ್ರಾಮದಲ್ಲಿ ಜೀರ್ಣೋದ್ಧಾರಗೊಂಡಿರುವ ಶ್ರೀ ಕಲ್ಲೇಶ್ವರ ದೇವಾಲಯದ ಲೋಕಾರ್ಪಣ ಕಾರ್ಯಕ್ರಮದಲ್ಲಿ ಮಾತನಾಡಿ, ಬದುಕಿನಲ್ಲಿ ಮುಕ್ತಿ ಕಾಣದ ಜೀವ ಹಾಗೂ ಜೀವನ ಶೂನ್ಯ ಎಂದು ಆಶೀರ್ವಚನ ನೀಡಿದರು.

ಭಗವಂತನನ್ನು ತಿಳಿದುಕೊಳ್ಳಲು ಅಥವಾ ಪರಿಚಯಿಸಿಕೊಳ್ಳಲು ಗುರು ಬೇಕು. ಹಣವಂತರು ದಾನ ಮಾಡಿದರೆ ಬಡವರು ಧ್ಯಾನ ಮಾಡಬೇಕು. ಇಲ್ಲಿ ಭಗವಂತನಿಲ್ಲದೆ ಯಾರ ಬದುಕು ನಡೆಯಲು ಸಾಧ್ಯವಿಲ್ಲ ಎಂದು ತಿಳಿಸಿದರು.

ನುಗ್ಗೇಹಳ್ಳಿ ಪುರವರ್ಗ ಹಿರೇಮಠದ ಶ್ರೀ ಮಹೇಶ್ವರ ಶಿವಾಚಾರ್ಯ ಮಾತನಾಡಿ, ಭಾರತೀಯ ಸಂಸ್ಕೃತಿಯು ಹಿಂದೂ ಧರ್ಮದ ತಳಹದಿಯ ಮೇಲೆ ನಿಂತಿದ್ದು ದೈನಂದಿನ ಬದುಕು, ಸಂಸ್ಕಾರ ಹಾಗೂ ಸಂಸ್ಕೃತಿಯೇ ಸನಾತನ ಧರ್ಮವಾಗಿ ಸ್ಥಾಪನೆಗೊಂಡಿದೆ. ಹಿಂದೂ ಧರ್ಮ ನಿನ್ನೆ ಮೊನ್ನೆಯದಲ್ಲ, ಯುಗ ಯುಗಗಳಲ್ಲಿ ಆಯಾ ಕಾಲಘಟ್ಟದ ಐತಿಹಾಸಿಕ ಹಿನ್ನಲೆಗೆ ಸಾಕ್ಷಿಯಾಗಿದೆ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ದೇಗುಲದ ನಿರ್ಮಾಣಕ್ಕೆ ಹೇಮಾವತಿ ಸಕ್ಕರೆ ಕಾರ್ಖಾನೆ ಸೇರಿ ವಿವಿಧ ಮೂಲ ಗಳಿಂದ 50 ಲಕ್ಷ ರೂ. ಅನುದಾನ ಕಲ್ಪಿಸಲಾಗಿದೆ. ಮತ್ತಷ್ಟು ಅನುದಾನ ಕಲ್ಪಿಸಿ ದೇವರ ಕಾರ್ಯ ಸೇರಿದಂತೆ ಮದುವೆ ಹಾಗೂ ಇತರೆ ಸಮಾರಂಭಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಮುದಾಯ ಭವನ ನಿರ್ಮಿಸಲಾಗುವುದು ಎಂದರು.

ನಾನು ಚುನಾವಣೆ ವೇಳೆ ಬರುವ ವ್ಯಕ್ತಿಯಲ್ಲ, ಜನಗಳ ಮಧ್ಯ ನಿಂತು ಅವರ ಕಷ್ಟಗಳಿಗೆ ಸ್ಪಂದಿಸುತ್ತೇನೆ. ರಾಜಕೀಯವೇ ಬೇರೆ ಜನಗಳ ಸಂಕಷ್ಟಗಳಿಗೆ ನೆರವಾಗುವ ವಿಚಾರವೇ ಬೇರೆ. ತಾಲ್ಲೂಕಿನ ನೀರಾವರಿ ಯೋಜನೆಗೆ ಹಗಲಿರುಳು ಶ್ರಮಿಸಿರುವ ಫಲವಾಗಿ 200 ಕ್ಕೂ ಹೆಚ್ಚು ಕೆರೆ ಕಟ್ಟೆಗಳಿಗೆ ಕಳೆದ 2-3 ವರ್ಷಗಳಿಂದ ನೀರು ತುಂಬಿಸಲಾಗುತ್ತಿದೆ. ಅದರಿಂದ ವ್ಯಾಪ್ತಿಯ ಅಂತರ್ಜಲ ಚೇತರಿಕೆ ಕಂಡಿದೆ. ಕೊಳವಿ ಬಾವಿಗಳಲ್ಲಿಯೂ ನೀರಿನ ಪ್ರಮಾಣ ಏರಿಕೆಯಾಗಿದ್ದು ರೈತರ ಬದುಕು ಹಸನಾಗಿದೆ ಎಂದು ತಿಳಿಸಿದರು.

ಕೆರೆಯ ಮೂಲ ಉಳಿಸುವುದು ಹಾಗೂ ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಜಮೀನುಗಳಿಗೆ ಮಣ್ಣು ಸಾಗಿಸುವ ಬರದಲ್ಲಿ ಕೆರೆ ಅಂಗಳದ ಎಲ್ಲೆಂದರಲ್ಲಿ ಅವೈಜ್ಞಾನಿಕವಾಗಿ ಅತಿ ಹೆಚ್ಚು ಆಳವಾಗಿ ಮಣ್ಣು ತೆಗೆಯಲಾಗಿದೆ. ಅದರಿಂದ ಸಂಗ್ರಹವಾಗುವ ನೀರು ಹೆಚ್ಚು ದಿನಗಳು ಉಳಿಯುವುದಿಲ್ಲ. ದಯವಿಟ್ಟು ಕೆರೆ ಮೂಲ ಉಳಿಸುವಲ್ಲಿ ಕೈಜೋಡಿಸಬೇಕೆಂದು ಮನವಿ ಮಾಡಿದರು.

ತೆಂಡೆಕೆರೆ ಮಠದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಟಿಎಪಿಸಿಎಂಎಸ್ ಅಧ್ಯಕ್ಷ ಮೆಡಿಕಲ್ ವೆಂಕಟೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ವಳಗೇರಹಳ್ಳಿ ಮಂಜೇಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ನಂಜುಂಡೇಗೌಡ, ನುಗ್ಗೇಹಳ್ಳಿ ಸೊಸೈಟಿ ಮಾಜಿ ಅಧ್ಯಕ್ಷ ಸಂಪತ್ ಕುಮಾರ್, ದೇಗುಲದಶಿಲ್ಪಿ ರಮೇಶ್, ಅರ್ಚಕರಾದಶಂಭುಲಿಂಗ ಸ್ವಾಮೀಜಿ, ಪ್ರಮುಖರಾದ ರಾಜೇಶ್, ಧರ್ಮಣ್ಣ, ಶಂಕರ್, ಕೃಷ್ಣೇಗೌಡ, ರಘು, ಸತೀಶ್, ಹರೀಶ್, ಯುವರಾಜ್, ಸ್ವಾಮಿ, ಮಂಜುನಾಥ್, ದೀಪು, ಶಿವಣ್ಣ ಹಾಗೂಸುತ್ತಲ ಗ್ರಾಮಗಳಿಂದ ಭಕ್ತರು ಪಾಲ್ಗೊಂಡಿದ್ದರು.

## ಜಿಲ್ಲಾ ಬಿಜೆಪಿಗೆ ಪದಾಧಿಕಾರಿಗಳ ನೇಮಕ

• ಪ್ರಜೋದಯ ವರದಿ

**ಹಾಸನ:** ರಾಜ್ಯಾಧ್ಯಕ್ಷರ ಸೂಚನೆ ಮೇರೆಗೆ ಜಿಲ್ಲಾ ಬಿಜೆಪಿಯ ವಿವಿಧ ಘಟಕಗಳಿಗೆ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರು ಹಲವರನ್ನು ನಿಯುಕ್ತಿಗೊಳಿಸಿ ಆದೇಶ ಹೊರಡಿಸಿದ್ದಾರೆ.

ಜಿಲ್ಲಾ ಉಪಾಧ್ಯಕ್ಷರಾಗಿ ಎ.ಹೆಚ್. ರಮೇಶ್, ಬಿ.ಎಸ್.ಪ್ರತಾಪ್, ಎ.ಡಿ.ಚಂದ್ರಶೇಖರ್, ಡಾ.ಹೆಚ್.ಆರ್.ನಾರಾಯಣ ಸ್ವಾಮಿ, ಡಿ.ಡಿ.ಗಂಗಾಧರ್ ಹಾಗು ರತ್ನ ಪ್ರಕಾಶ್ ಅವರನ್ನು ನೇಮಕ ಮಾಡಿದ್ದಾರೆ.

ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾಗಿ ಅಮಿತ್ ಶೆಟ್ಟಿ, ರಾಜ್‌ಕುಮಾರ್ ಕ್ಯಾಮನಹಳ್ಳಿ ಹಾಗು ಗಿರೀಶ್ ನಂಬಿಹಳ್ಳಿ, ಜಿಲ್ಲಾ ಕಾರ್ಯದರ್ಶಿಗಳಾಗಿ ಪ್ರಸಾದ್ ಹೊಸಕೋಟೆ, ಛಾಯಾ ಕೃಷ್ಣಮೂರ್ತಿ, ಪುರುಷೋತ್ತಮ್, ಲೋಕೇಶ್ ಹಲ್ಮಿಡಿ, ಗಿರೀಶ್ ತೂಬಿನಕೆರೆ ಮತ್ತು ಕಿರಣ್ ಗೌಡ ಅವರನ್ನು ನೇಮಿಸಿದ್ದಾರೆ. ಉಳಿದಂತೆ ವಕ್ತಾರರಾಗಿ ಮೋಹನ್ ಕುಮಾರ್, ಸಹ ವಕ್ತಾರರಾಗಿ ಡಾ.ಚೇತನ್ ಕುಮಾರ್, ಮಾಧ್ಯಮ ಪ್ರಮುಖ್ ಆಗಿ ಬಿ.ವೇದಾವತಿ ಮತ್ತು ಸಹ ಪ್ರಮುಖ ಆಗಿ ಹೆಚ್.ಎ.ದಯಾನಂದ್ ಅವರನ್ನು ನೇಮಿಸಿ ಆದೇಶ ಹೊರಡಿಸಿದ್ದಾರೆ.

# ಜನಸ್ಪಂದನಾ ಸಭೆ: ಶಾಲಾ ಜಾಗ ಒತ್ತುವರಿ ತೆರವಿಗೆ ಅರ್ಜಿ

• ಪ್ರಜೋದಯ ವರದಿ



**ಹೊಳೆನರಸೀಪುರ:** ಸಾರ್ವಜನಿಕ ಕುಂದು ಕೊರತೆ ಆಲಿಸಲು ಆಯೋಜಿಸಿದ್ದ ಜನಸ್ಪಂದನಾ ಸಭೆಗೆ ಈ ಬಾರಿ ಕಳೆದ ಬಾರಿಗಿಂತಲೂ ಹೆಚ್ಚಿನ ಸಮಸ್ಯೆಗಳು ಕೇಳಿಬಂದವು.

ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ನಾನಾ ಇಲಾಖೆಗಳ ಅಧಿಕಾರಿಗಳೊಂದಿಗೆ ತಹಶೀಲ್ದಾರ್ ವೈ.ಎಂ. ರೇಣುಕುಮಾರ್ ಕುಂದುಕೊರತೆ ಸಭೆ ನಡೆಸಿ ಅರ್ಜಿ ಸ್ವೀಕರಿಸಿದರು.

ಕಂದಾಯ ಇಲಾಖೆಗೆ ಒಳಪಡುವ 7 ಅರ್ಜಿಗಳು, ಪುರಸಭೆಯ 3 ಸೇರಿ ಉಳಿದಂತೆ ನಾನಾ ಶಾಲೆಗಳ ಜಾಗ ಒತ್ತುವರಿ ತೆರವುಗೊಳಿಸುವಂತೆ ಹಾಗೂ ಶಾಲೆ ಜಾಗ ಖಾತೆ ಮಾಡಿ ಕೊಡುವಂತೆ ಕೋರಿ ಅರ್ಜಿ ಸಲ್ಲಿಕೆಯಾಯಿತು.

ಹಡವನಹಳ್ಳಿ ಗ್ರಾಮದ ಯುವ ರೈತ ಲಕ್ಕೇಗೌಡ ನನ್ನ ಹೆಸರಿನಲ್ಲಿ 11.14 ಎಕರೆ ಜಮೀನು ಇತ್ತು. ನಾಲೆ ಮತ್ತು ರಸ್ತೆ ನಿರ್ಮಾಣಕ್ಕಾಗಿ 1974 ರಲ್ಲಿ ಸರ್ಕಾರ ಭೂಸ್ವಾಧೀನ ಪಡಿಸಿಕೊಂಡಿರುತ್ತದೆ. ಪರಿಹಾರ ಮೊತ್ತ 500 ರೂ. ಪಡೆದಿರುತ್ತೇವೆ. ಪ್ರಸ್ತುತ 4 ಗುಂಟೆ ಇದೆ ಎಂದು ಪಹಣಿಯಲ್ಲಿನ ನನ್ನ ಹೆಸರು ಬರುತ್ತಿದೆ. ಆದರೆ ಉಳಿಕೆ ಭೂಮಿ ಕಳೆದು ಹೋಗಿದೆ ಗುರುತಿಸಿ ಕೊಡಿ ಎಂದು ಅರ್ಜಿ ನೀಡಿದ್ದು, ಸಭೆಯಲ್ಲಿ ಹುಬ್ಬೇರಿಸುವಂತೆ ಮಾಡಿತ್ತು. ಮುಂದಿನ 4 ದಿನಗಳ ನಂತರ ಜಾಗ ಸರ್ವೇ ಮಾಡಿಸಿ ಗುರುತು ಪಡಿಸುವಂತೆ ಭೂ ಮಾಪಕರಿಗೆ ತಹಶೀಲ್ದಾರ್ ಸೂಚನೆ ನೀಡಿದರು.

ಅದೇ ಹಡವನಹಳ್ಳಿ ಗ್ರಾಮದ ಮತ್ತೋರ್ವ ಯುವಕ ಕಿರಣ ಎಂಬಾತ ಅರ್ಜಿ ಸಲ್ಲಿಸಿ, ನನ್ನ ತಾಯಿಯ ಸಹಿ ನಕಲಿ ಮಾಡಿದ್ದಾರೆ. ಪ್ರಕರಣ ಕುರಿತು ಉಪವಿಭಾಗಾಧಿಕಾರಿ ಕಚೇರಿಯಲ್ಲಿ ಇತ್ಯಾರ್ಥಕ್ಕೆ ಇದೆ. ಕಳೆದ ಬಾರಿ ಜಿಲ್ಲಾಧಿಕಾರಿ ಲತಾ ಕುಮಾರಿ ತಾಲ್ಲೂಕಿಗೆ ಭೇಟಿ ನೀಡಿದ್ದ ಸಂದರ್ಭ ಅರ್ಜಿ ಸಲ್ಲಿಸಿದ್ದೆ. ತಪ್ಪಿತಸ್ಥ ಕಂದಾಯ ಇಲಾಖೆ ನೌಕರರ ವಿರುದ್ಧ ಕ್ರಮಕ್ಕೆ ಆದೇಶಿಸಿದ್ದರು. ಈ ವರೆಗೂ ಕ್ರಮ ಕೈಗೊಳ್ಳದ ಬಗ್ಗೆ ಮನವಿ ಸಲ್ಲಿಸಿದರು. ಜಿಲ್ಲಾಧಿಕಾರಿಗೆ ವರದಿ ನೀಡುವುದಾಗಿ ತಹಶೀಲ್ದಾರ್ ಹಿಂಬರಹ ನೀಡಿದರು.

ತಾಲ್ಲೂಕಿನ ಕಡವಿನಹೊಸಹಳ್ಳಿ ಶಾಲೆಗೆ ಸೇರಿದ 1.5 ಗುಂಟೆಯನ್ನು ಒತ್ತುವರಿ ನಡೆಸಿದ್ದಾರೆ. ತೆರವುಗೊಳಿಸಿ ಕೊಡಿ ಎಂದು ಗ್ರಾಮದ ಕೆಲವರು ಅರ್ಜಿ ಸಲ್ಲಿಸಿದರು. ಬಂಡಿಗನಹಳ್ಳಿ ಶಾಲೆ ಜಾಗದಲ್ಲೇ ಮನೆ ನಿರ್ಮಿಸಿರುವ ಗ್ರಾಮಸ್ಥನೊಬ್ಬನ ವಿರುದ್ದ ಶಿಕ್ಷಕ ದೂರು ಸಲ್ಲಿಸಿದರು. ಜೋಡಿಗುಬ್ಬಿ ಗ್ರಾಮದ ಶಾಲೆ ಖಾತೆ ಮಾಡಿ ಕೊಡುವಂತೆ ಕೋರಿ ಮುಖ್ಯಶಿಕ್ಷಕ ನಾಗರಾಜ್ ಅರ್ಜಿ ನೀಡಿದರು. ಬಿಇಒ ಸೋಮಲಿಂಗೇಗೌಡರು ಸ್ಥಳ ಪರಿಶೀಲನೆ ಸಂದರ್ಭ ಹಾಜರಿರುವಂತೆ ತಹಶೀಲ್ದಾರ್ ಭೇಟಿಗೆ ದಿನ ನಿಗದಿಪಡಿಸಲು ಸೂಚಿಸಿದರು.

ಪರಿಶಿಷ್ಟ ಸಮೂದಾಯದ ಸವಲತ್ತು ಕೋರಿದ್ದರೂ, ಕೃಷಿ ಸಹಾಯಕ ನಿರ್ದೇಶಕಿ ಸ್ವಪ್ನ ಸ್ಪಂದಿಸುತ್ತಿಲ್ಲ ಎಂದು ಪಾಸ್ವಾನ್ ಮತ್ತು ರಾಜೇಶ್ ಎಂಬುವವರು ತಹಶೀಲ್ದಾರ್ ಬಳಿ ದೂರು ನೀಡಿದರು. ಸೂಕ್ತ ಮಾಹಿತಿ ಮತ್ತು ಇಲಾಖೆಯ ನಿಯಮ ಅನುಸರಿಸಿ ಸವಲತ್ತು ಒದಗಿಸುವಂತೆ ತಹಶೀಲ್ದಾರ್ ಅಧಿಕಾರಿಗೆ ನಿರ್ದೇಶನ ನೀಡಿದರು.

ತಾಲ್ಲೂಕು ಪಂಚಾಯಿತಿ ಇಒ ಮುನಿರಾಜ್, ಸರ್ವೇ ಅಧಿಕಾರಿ ಹಾಗೂ ಎಲ್ಲಾ ಇಲಾಖೆ ಅಧಿಕಾರಿಗಳು ಹಾಜರಿದ್ದರು. ರಾಜ್ಯ ಸಾರಿಗೆ ಇಲಾಖೆ ಡಿಪೋ ಮ್ಯಾನೇಜರ್ ಸಭೆಗೆ ಗೈರಾಗಿದ್ದರ ಬಗ್ಗೆ ನೋಟಿಸ್ ನೀಡುವಂತೆ ತಹಶೀಲ್ದಾರ್ ಸೂಚಿಸಿದರು.

# 1.6 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಭೂಮಿಪೂಜೆ

• ಪ್ರಜೋದಯ ವರದಿ



**ಶ್ರವಣಬೆಳಗೊಳ:** ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಸುಗ್ಗನಹಳ್ಳಿ ಗೇಟ್‌ನಿಂದ ಕಾಂತರಾಜಪುರ ಮುಖ್ಯ ರಸ್ತೆ ಸಂಪರ್ಕಿಸುವ 2.5 ಕಿ.ಮೀ. ರಸ್ತೆಯನ್ನು 1.6 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ ಎಂದು ಶಾಸಕ ಸಿ.ಎನ್ .ಬಾಲಕೃಷ್ಣ ಅವರು ಹೇಳಿದರು.

ಹೋಬಳಿಯ ಕಾಂತರಾಜಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಗ್ಗನಹಳ್ಳಿ ಗೇಟ್‌ನಲ್ಲಿ ಏರ್ಪಡಿಸಿದ್ದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಈ ಗ್ರಾಮದ ರಸ್ತೆ ನಿರ್ಮಾಣದಿಂದಾಗಿ ಮಳೆಗಾಲದಲ್ಲಿ ತೊಂದರೆ ಅನುಭವಿಸುತ್ತಿದ್ದ ಗ್ರಾಮಸ್ಥರಿಗೆ ಅನುಕೂಲವಾಗಲಿದೆ. ಸುಗ್ಗನಹಳ್ಳಿ ಗ್ರಾಮದ ರಸ್ತೆ ತುಂಬಾ ಹದಗೆಟ್ಟಿದ್ದು, ಗುಣಮಟ್ಟದ ಕಾಮಗಾರಿ ಮಾಡಬೇಕೆಂದು ಲೋಕೋಪಯೋಗಿ ಇಲಾಖೆ ಇಂಜಿನೀಯರ್ ಮತ್ತು ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಕೆ.ಹೊಸಹಳ್ಳಿ ಹಾಗು ಕೆ.ಬೊಮ್ಮೇನಹಳ್ಳಿ ಗ್ರಾಮಗಳ ನಿರಂತರ ವಿದ್ಯುತ್ ಸಂಪರ್ಕ ಕಾಮಗಾರಿಗೆ ಚಾಲನೆ ನೀಡಿದರು. ಗ್ರಾಮ ಪಂಚಾಯಿತಿ ಸದಸ್ಯ ಮಹೇಶ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರವಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಬಸವರಾಜು, ಇಂಜಿನೀಯರ್ ಮಂಜಣ್ಣ, ಗುತ್ತಿಗೆದಾರ ಜಯಂತ್ ಮುಖಂಡರಾದ ಶಿವಲಿಂಗಪ್ಪ, ಕಾಳೇಗೌಡ, ಕೀರ್ತಿ, ಶ್ರೀರಂಗ, ಕ್ಷೇತ್ರಪಾಲ್, ಮಧು, ತಾಲ್ಲೂಕು ವಿದ್ಯುತ್ ಗುತ್ತಿಗೆದಾರರ ಸಂಘದ ರಮೇಶ್, ಸುರೇಶ್ ಇದ್ದರು.

# ವ್ಯವಹಾರ ಜ್ಞಾನ ವೃದ್ಧಿಗೆ ಮಕ್ಕಳ ಸಂತೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಮಕ್ಕಳ ಸಂತೆ ಎಂಬುದು ವಿದ್ಯಾರ್ಥಿಗಳಿಗೆ ಕೇವಲ ಶೈಕ್ಷಣಿಕ ಜ್ಞಾನವನ್ನಷ್ಟೇ ಅಲ್ಲದೆ ಜೀವನಕ್ಕೆ ಅತ್ಯಗತ್ಯವಾಗಿ ಬೇಕಾದ ವ್ಯವಹಾರಿಕ ಜ್ಞಾನವನ್ನು ತಿಳಿಸುವಂತಹ ಮಹತ್ವದ ಕಾರ್ಯವಾಗಿದೆ ಎಂದು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಶ್ರವಣಬೆಳಗೊಳದ ಅಂಬಿಕಾ ಶಾಲೆಯಲ್ಲಿ ಆಯೋಜಿಸಿದ್ದ ಮಕ್ಕಳ ಸಂತೆ ಹಾಗೂ ಆಹಾರ ಮೇಳ ಉದ್ಘಾಟಿಸಿ ಮಾತನಾಡಿ, ಮಕ್ಕಳಲ್ಲಿ ಆರ್ಥಿಕ ಜ್ಞಾನ ಮತ್ತು ಗ್ರಾಮೀಣ ಭಾಗದ ಜನರ ಜೀವನ ಹೇಗಿರುತ್ತದೆ ಎಂಬುದನ್ನು ಮಕ್ಕಳ ಸಂತೆ ಮತ್ತು ಆಹಾರ ಮೇಳದಲ್ಲಿ ಅವರು ಪ್ರತ್ಯಕ್ಷವಾಗಿ ನೋಡುವ ಮೂಲಕ ಅದನ್ನು ತಿಳಿಯುವಂತಹ ಒಂದು ಉತ್ತಮ ವೇದಿಕೆ ಇದಾಗಿದ್ದು, ಪ್ರಾಥಮಿಕ ಹಂತದಲ್ಲೇ ವಿದ್ಯಾರ್ಥಿಗಳಲ್ಲಿ ವ್ಯವಹಾರ ಜ್ಞಾನವನ್ನು ಗುರುತಿಸಲು ಮಕ್ಕಳ ಸಂತೆ ಕಾರ್ಯಕ್ರಮ ಸಹಕಾರಿಯಾಗಿದೆ ಎಂದರು.

ಮಕ್ಕಳಿಗೆ ಪಠ್ಯ ಚಟುವಟಿಕೆಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳನ್ನು ನಡೆಸುವುದರಿಂದ ಅವರ ಬೌದ್ಧಿಕ ಜ್ಞಾನ ವಿಕಾಸಗೊಳ್ಳುವುದರೊಂದಿಗೆ ಉತ್ತಮ ವ್ಯಕ್ತಿತ್ವ ರೂಪುಗೊಳ್ಳಲು ಸಹಕಾರಿ ಯಾಗುತ್ತದೆ. ಮಕ್ಕಳಲ್ಲಿ ಲೆಕ್ಕಾಚಾರ ಪ್ರವೃತ್ತಿ ಹಾಗೂ ಗ್ರಾಹಕರೊಂದಿಗೆ ವರ್ತಿಸುವ ವ್ಯವಹಾರ ಜ್ಞಾನ ಹೆಚ್ಚುತ್ತದೆಂದು ತಿಳಿಸಿದರು.

ಸಾವಯವ ಕೃಷಿಕ ರಾಘವೇಂದ್ರ, ಬೆಕ್ಕ ಮಾತನಾಡಿ, ಮಕ್ಕಳ ಸಂತೆ ಶಾಲೆಗಳಲ್ಲಿ ಆಯೋಜಿಸ ಲಾಗುವ ಒಂದು ವಿಶಿಷ್ಟ ಕಾರ್ಯಕ್ರಮವಾಗಿದ್ದು, ಮಕ್ಕಳು ಸ್ವತಃ ವ್ಯಾಪಾರಿಗಳಾಗಿ ಹಣ್ಣು- ಹಂಪಲು, ತಿನಿಸುಗಳು, ಗೃಹೋಪಯೋಗಿ ವಸ್ತುಗಳನ್ನು ಮಾರಾಟ ಮಾಡುವ ಮೂಲಕ ತಮ್ಮ ವ್ಯವಹಾರಿಕ ಜ್ಞಾನ, ಲೆಕ್ಕಾಚಾರ ಹಾಗೂ ಗ್ರಾಹಕರೊಂದಿಗೆ ವ್ಯವಹರಿಸುವ ಕೌಶಲ್ಯವನ್ನು ಕಾರ್ಯಕ್ರಮದಲ್ಲಿ ಕಲಿಯುತ್ತಾರೆ. ಸ್ವಾವಲಂಬನೆಯ ಪಾಠಗಳನ್ನು ಕಲಿಯುವುದರ ಜೊತೆಗೆ ಮಕ್ಕಳಲ್ಲಿ ಸೃಜನಶೀಲತೆ ಆರ್ಥಿಕ ಜ್ಞಾನ ವೃದ್ಧಿಯಾಗುತ್ತದೆ ಎಂದರು.

ಮಕ್ಕಳ ಸಂತೆಯಲ್ಲಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ವಿದ್ಯಾರ್ಥಿಗಳಿಂದ ವಿವಿಧ ಪದಾರ್ಥಗಳನ್ನು ಕೊಳ್ಳುವ ಮೂಲಕ ಮಕ್ಕಳಿಗೆ ಸ್ಫೂರ್ತಿ ನೀಡಿದರು.

ವಿದ್ಯಾರ್ಥಿಗಳು ಉತ್ಸಾಹದಿಂದ ವಿವಿಧ ತರಕಾರಿಗಳು, ಹಣ್ಣುಗಳು, ಬಗೆಬಗೆಯ ತಿಂಡಿ ತಿನಿಸುಗಳಾದ ಪಾನಿಪುರಿ, ಸಲಾಡ್, ಜ್ಯೂಸ್, ಬಿಸ್ಕತ್ ಸೇರಿ ಇತರೆ ಪದಾರ್ಥಗಳನ್ನು ಮಾರಾಟ ಮಾಡಿ ಸಂಭ್ರಮಿಸಿದರು. ತರಕಾರಿ, ತಂಪು ಪಾನೀಯ, ಪಾನಿಪುರಿ, ಬೇಲ್ ಪುರಿ, ಸೊಪ್ಪು ಮತ್ತಿತರೆ ಪದಾರ್ಥಗಳನ್ನು ಪಾಲಕರು ಮಕ್ಕಳಿಂದ ಖರೀದಿಸಿ ಪಾಲಕರು ಮಕ್ಕಳ ವ್ಯವಹಾರ ಜ್ಞಾನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬಾಹುಬಲಿ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಬಬನ್ ಪಿ.ದತವಾಡೆ ಮಾತನಾಡಿದರು. ಮುಖ್ಯ ಶಿಕ್ಷಕಿ ಸರೋಜಾ, ರೈತ ಸಂಘದ ಅಧ್ಯಕ್ಷ ಮಂಜೇಗೌಡ ಮುಂತಾದವರಿದ್ದರು.

# ಬೆಳಕು ವೃದ್ಧಾಶ್ರಮದ ಗೀತಾಗೆ ನಿವೇದಿತಾ ಪ್ರಶಸ್ತಿ

• ಪ್ರಜೋದಯ ವರದಿ




**ಅರಕಲಗೂಡು:** ಭಾರತೀಯ ಮಹಿಳೆಯರ ಸಾಮಾಜಿಕ ಕಳಕಳಿ, ಸಂತೋಷ ಉದಾತ್ತ ವ್ಯಕ್ತಿತ್ವವೂ ರಾಷ್ಟ್ರೀಯ ಜೀವನದ ಸ್ವತ್ತ ಎಂಬುದನ್ನು ಪ್ರತಿಪಾದಿಸಿದವರು ಸೋದರಿ ನಿವೇದಿತಾ ಅವರು, ಇಂತಹವರ ಹೆಸರಿನಲ್ಲಿ ಶಾಲಾ ಶಿಕ್ಷಣ ಸಂಸ್ಥೆಯೊಂದು ಸಮಾಜ ಸೇವೆಯಲ್ಲಿ ತೊಡಗಿಕೊಂಡಿರುವವರಿಗೆ ಪ್ರಶಸ್ತಿ ನೀಡುತ್ತಿರುವುದು ಅತ್ಯಂತ ಅರ್ಥಪೂರ್ಣ ಹಾಗು ಇತರೆ ಶಾಲೆಗಳಿಗೆ ಮಾದರಿಯಾಗಿದೆ ಎಂದು ಜಿಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಶಿವರಾಮೇಗೌಡ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣ ಶಿಕ್ಷಕರ ಭವನದಲ್ಲಿ ನಡೆದ ನಿವೇದಿತಾ ವಿದ್ಯಾಶಾಲೆ 30ನೇ ವರ್ಷದ ಶಾಲಾ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ಬೆಳಕು ವೃದ್ಧಾಶ್ರಮದ ಶ್ರೀಮತಿ ಕೆ.ಗೀತಾ ಅವರಿಗೆ 2025-26ನೇ ಸಾಲಿನ ನಿವೇದಿತಾ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಜಿಲ್ಲೆಯ ಮಟ್ಟಿಗೆ ಹೇಳಬೇಕೆಂದರೇ 300ಕ್ಕೂ ಅಧಿಕ ಸಂಖ್ಯೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಭರ್ಜರಿಯಾಗಿ ಪ್ರತಿವರ್ಷವೂ ಲಕ್ಷಾಂತರ ರೂ. ವ್ಯಯಮಾಡಿ ವಾರ್ಷಿಕೋತ್ಸವ ಸೇರಿ ಇತರೆ ಮನರಂಜನೆ ಕಾರ್ಯಕ್ರಮಗಳನ್ನು ಮಾಡುತ್ತವೆ. ಆದರೆ ಅರಕಲಗೂಡಿನ ನಿವೇದಿತಾ ವಿದ್ಯಾಶಾಲೆ ಈ ಎಲ್ಲಾ ಶಾಲೆಗಳಿಗೆ ಮಾದರಿಯಾಗಿ ನಿಜವಾಗಿ ಅರ್ಹತೆ ಇರುವ ಸಮಾಜ ಸೇವೆಯನ್ನು ಮೈಗೂಡಿಸಿಕೊಂಡಿರುವ ಅದರಲ್ಲಿಯೂ ಕೂಡ ನಿರ್ಲಕ್ಷ್ಯಕ್ಕೆ ಒಳಗಾಗಿ, ಕುಟುಂಬದವರಿಂದ ಬೇಡವಾಗಿ ಆಶ್ರಯಪಡಿದಿರುವ ವಯೋ ವೃದ್ಧರಿಗೆ ಆಶ್ರಯ ನೀಡಿರುವ ರಾಮನಾಥಪುರದ ಬೆಳಕು ವೃದ್ಧಾಶ್ರಮದ ಗೀತಾ ಮೇಡಂ ಅವರ ಕಾರ್ಯಸಾಧನೆ ಅತೀವ ಸಂತಸವನ್ನುಂಟುಮಾಡಿದೆ ಎಂದು ಹೇಳಿದರು.

ಸೇವೆಯಲ್ಲಿ ಸರ್ಕಾರಿ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿಯಾದ ಬಳಿಕ ಬಂದಂತಹ ಹಣದಲ್ಲಿ ಒಂದು ಎಕರೆ ಕೃಷಿ ಜಮೀನು ಖರೀದಿಸಿ ಕೋವಿಡ್ ಸಂದರ್ಭದಲ್ಲಿ ವೃದ್ಧಾಶ್ರಮ ವನ್ನು ತೆರೆದು ಸುಮಾರು 20ಕ್ಕೂ ಹೆಚ್ಚಿನ ವೃದ್ಧರಿಗೆ ಆಶ್ರಯ ನೀಡಿ ಅವರನ್ನು ತನ್ನ ಕುಟುಂಬದವರಂತೆ ಪೋಷಣೆ ಮಾಡುತ್ತಿರುವುದನ್ನು ಕೇಳಿ ತುಂಬಾ ಅಭಿಮಾನ ಉಂಟಾಗಿದೆ. ತಿಂಗಳಿಗೆ ಬರುವ ನಿವೃತ್ತಿ ವೇತನದಲ್ಲಿ ಆಶ್ರಮ ನಡೆಸುತ್ತಿದ್ದಾರೆ. ಇಂತಹವರ ನೆರವಿಗೆ ಸರ್ಕಾರ, ಸಂಘ-ಸಂಸ್ಥೆಗಳು ಸ್ವಯಂಪ್ರೇರಿತವಾಗಿ ಕೈಜೋಡಿಸಬೇಕಿದೆ. ತಾವು ಕೂಡ ನೆರವಿಗೆ ಬರುವುದಾಗಿ ಭರವಸೆ ನೀಡಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶ್ರೀಮತಿ ಗೀತಾ ಅವರು, ನಾನು ಕೂಡ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿದ್ದೇನೆ. ನನ್ನ ಜೀವನದಲ್ಲಿ ನೋಡಿಕೊಂಡು ಬೆಳೆದ, ಅನುಭವಿಸಿದ ಸಾಮಾಜಿಕ ಅಸಮಾನತೆ, ತಾರತಮ್ಯ, ಹಿರಿಯರ ಶೋಷಣೆ ಕಣ್ಣು ಮುಂದೆ ಇವೆ. ನನ್ನಿಂದ ಸಾಧ್ಯವಾಗುವ ನಿಟ್ಟಿನಲ್ಲಿ ಬೆಳಕು ಆಶ್ರಮವನ್ನು ತೆರೆದು ವೃದ್ಧರಿಗೆ ಆಶ್ರಯ ನೀಡಿದ್ದೇನೆ. ಇದು ನನಗೆ ಹೆಚ್ಚುಗಾರಿಕೆಯಲ್ಲ, ನನ್ನ ಕರ್ತವ್ಯವಾಗಿದೆ ಎಂದು ಹೇಳಿದರು.

ಪತ್ರಕರ್ತ ವಿಜಯ್‌ಕುಮಾರ್ ಅವರು ಮಾತನಾಡಿ, ಪಟ್ಟಣದಲ್ಲಿ ಹತ್ತಾರು ಖಾಸಗಿ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಇವೆಲ್ಲವೂ ವ್ಯವಹಾರಿಕವಾಗಿ ತೊಡಗಿಕೊಂಡಿವೆ. ಕಳೆದ 40 ವರ್ಷಗಳಿಂದ ಪತ್ರಿಕಾ ಏಜೆಂಟ್, ವರದಿಗಾರರಾಗಿ ಮತ್ತು ಸಾಮಾಜಿಕ ಹೋರಾಟದಲ್ಲಿ ತೊಡಗಿಕೊಂಡಿರುವ ಹಿರಿಯ ಪತ್ರಕರ್ತರಾದ ಎ.ಆರ್.ಸುಬ್ಬರಾವ್ ಅವರು ಸ್ವಾಮಿ ವಿವೇಕಾನಂದರು, ಸಹೋದರಿ ನಿವೇದಿತಾ ಅವರ ಪ್ರಭಾವದಿಂದ ಪ್ರೇರಿತವಾಗಿ ಕಳೆದ 30ವರ್ಷಗಳ ಹಿಂದೆ ಆರಂಭಿಸಿದ ನಿವೇದಿತಾ ವಿದ್ಯಾಶಾಲೆಯಲ್ಲಿ ನೂರಾರು ಮಕ್ಕಳು ಅತಿ ಕಡಿಮೆ ಖರ್ಚಿನಲ್ಲಿ ಶೇ.30ರಷ್ಟು ಮಕ್ಕಳು ಉಚಿತವಾಗಿ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲಾ ಮಕ್ಕಳನ್ನು ತನ್ನ ಕುಟುಂಬದ ಮಕ್ಕಳಂತೆ ಅವರು ಪ್ರೀತಿಸಿ ಪ್ರೋತ್ಸಾಹಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮ ಕುರಿತು ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎ.ಆರ್.ಸುಬ್ಬರಾವ್, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ವಿಷ್ಣುಪ್ರಕಾಶ್, ನ್ಯಾಯಾಂಗ ಇಲಾಖೆ ನೌಕರ ಸತೀಶ್ , ಮುಖ್ಯಶಿಕ್ಷಕಿ ರಾಗಿಣಿ ಅವರು ಮಾತನಾಡಿದರು. ಸಂಜೆ ಮಕ್ಕಳಿಂದ ವಿವಿಧ ಸಾಂಸ್ಕೃತಿ ಕಾರ್ಯಕ್ರಮ ನಡೆಯಿತು.

## ಮೆಟ್ರೋ ದರ ಹೆಚ್ಚಳ ಸ್ಥಗಿತ

• ಪ್ರಜೋದಯ ವರದಿ

**ಬೆಂಗಳೂರು:** ಜನಾಕ್ರೋಶದ ಬಳಿಕ ಮೆಟ್ರೋ ದರ ಏರಿಕೆಯನ್ನು ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ಕೊನೆಗೂ ಕೈಬಿಟ್ಟಿದೆ.

ಕಳೆದ 10 ತಿಂಗಳ ಹಿಂದಷ್ಟೇ ಮೆಟ್ರೋ ದರ ಹೆಚ್ಚಳ ಮಾಡುವ ಮೂಲಕ ಜನಸಾಮಾನ್ಯರಿಗೆ ಬರೆ ಎಳೆದಿದ್ದ ದರ ನಿಗದಿ ಸಮಿತಿ ಮತ್ತೆ ಶೇ.5 ರಷ್ಟು ದರ ಏರಿಕೆ ಮಾಡಿ ಶಿಫಾರಸ್ಸು ಮಾಡಿತ್ತು. ಅದಕ್ಕೆ ರಾಜ್ಯ ಸರ್ಕಾರದ ಒಪ್ಪಿಗೆಯೂ ಸಿಕ್ಕಿತ್ತು. ಇದು ಇಂದಿನಿಂದ ಜಾರಿಗೆ ಬರಬೇಕಾಗಿತ್ತು. ಆದರೆ, ಕೇಂದ್ರ ಸರ್ಕಾರ ಬ್ರೇಕ್ ಹಾಕಿದ್ದು, ದರ ಹೆಚ್ಚಳ ಮಾಡದಂತೆ ಬಿಎಂಆರ್ ಸಿಎಲ್ ಗೆ ಸೂಚಿಸಿದೆ.

ನಗರ ವ್ಯವಹಾರಗಳ ಖಾತೆ ಸಚಿವ ಎಂ.ಎಲ್ ಖಟ್ಟರ್ ಅವರನ್ನು ಭೇಟಿ ಮಾಡಿದ ಸಂಸದ ತೇಜಸ್ವಿ ಸೂರ್ಯ, ವಾರ್ಷಿಕ ದರ ಏರಿಕೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ, ಸಾರ್ವಜನಿಕ ಹಿತದೃಷ್ಟಿಯಿಂದ ದರ ಪರಿಷ್ಕರಿಸಲು ಹೊಸ ದರ ನಿಗದಿ ಸಮಿತಿ ರಚಿಸುವಂತೆ ಮನವಿ ಮಾಡಿದ್ದರು.

# ಭಯೋತ್ಪಾದನೆ ವಿಚಾರದಲ್ಲಿ ಎಂದಿಗೂ ದ್ವಿಮುಖ ನೀತಿ ಇಲ್ಲ

## ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರೊಂದಿಗ ಮೋದಿ ಮಾತುಕತೆ

• ಪ್ರಜೋದಯ ವರದಿ

**ಕೌಲಾಲಂಪುರ :** ಭಯೋತ್ಪಾದನೆ ನಿಗ್ರಹ ವಿಚಾರದಲ್ಲಿ ಭಾರತ ಎಂದಿಗೂ ಡಬಲ್ ಸ್ಟ್ಯಾಂಡರ್ಡ್ ಧೋರಣೆ ಹೊಂದಿಲ್ಲವೆಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಘೋಷಿಸಿದ್ದಾರೆ.

ಭಾನುವಾರ ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರೊಂದಿಗಿನ ಮಾತುಕತೆಯ ನಂತರ ಮಾತನಾಡಿದ ಮೋದಿ, ಭಯೋತ್ಪಾದನೆಗೆ ಭಾರತದ ವಿಧಾನದ ಬಗ್ಗೆ ಬಲವಾದ ಸಂದೇಶವನ್ನು ನೀಡಿದ ಅವರು, ಬೆದರಿಕೆಯನ್ನು ನಿಭಾಯಿಸುವಲ್ಲಿ ಯಾವುದೇ ಅಸ್ಪಷ್ಟತೆ ಅಥವಾ ಆಯ್ದ ಮಾನದಂಡಗಳು ಇರಬಾರದು. ಭಾರತದ ನಿಲುವು ನಿಸ್ಸಂದಿಗ್ಧವಾಗಿದೆ. ಭಯೋತ್ಪಾದನೆಯ ವಿರುದ್ಧದ ಹೋರಾಟವು ದ್ವಿಮಾನದಂಡಗಳಿಲ್ಲ, ರಾಜಿ ಇಲ್ಲವೆಂದು ಒತ್ತಿ ಹೇಳಿದರು.

ಪ್ರಧಾನಿ ಮೋದಿ ಮತ್ತು ಕೌಲಾಲಂಪುರದಲ್ಲಿ ಅವರ ಮಲೇಷ್ಯಾ ಪ್ರತಿರೂಪದ ನಡುವೆ ವ್ಯಾಪಕ ಮಾತುಕತೆಗಳ ನಂತರ, ಭಾರತ ಮತ್ತು ಮಲೇಷ್ಯಾ ರಕ್ಷಣೆ ಮತ್ತು ಭದ್ರತೆ, ಸೆಮಿಕಂಡಕ್ಟರ್‌ಗಳು ಮತ್ತು ವ್ಯಾಪಾರದಾದ್ಯಂತ ಸಹಕಾರವನ್ನು ಗಾಢವಾಗಿಸಲು ಹಲವಾರು ಉಪಕ್ರಮಗಳನ್ನು ಅನಾವರಣಗೊಳಿಸಿದವು. ನಾವು ರಕ್ಷಣಾ ಸಹಕಾರವನ್ನು ಹೆಚ್ಚು ಸಮಗ್ರಗೊಳಿಸುತ್ತೇವೆಂದು ಹೇಳಿದರು.

ಭ' ದ', ತ' ಯ ಹೊರತಾಗಿ, ಮಾತುಕತೆಗಳು ಉದಯೋನ್ಮುಖ ತಂತ್ರಜ್ಞಾನಗಳು ಮತ್ತು ಆರ್ಥಿಕ ಸಹಯೋಗದ ಮೇಲೂ ಕೇಂದ್ರೀಕರಿಸಿದವು. ಭಾರತ ಮತ್ತು ಮಲೇಷ್ಯಾ ಅತ್ಯಾಧುನಿಕ ಮತ್ತು ನಿರ್ಣಾಯಕ ವಲಯಗಳಲ್ಲಿ ನಿಕಟವಾಗಿ ಕೆಲಸ ಮಾಡುತ್ತವೆ. ಡಿಜಿಟಲ್ ತಂತ್ರಜ್ಞಾನಗಳ ಜೊತೆಗೆ, ನಾವು ಅರೆವಾಹಕಗಳು, ಆರೋಗ್ಯ ಮತ್ತು ಆಹಾರ ಭದ್ರತೆಯಲ್ಲಿ ಪಾಲುದಾರಿಕೆಯನ್ನು ಮುನ್ನಡೆಸುತ್ತೇವೆಂದರು.

ಪ್ರಧಾನಿಯವರು ಇಂಡೋ-ಪೆಸಿಫಿಕ್‌ಗೆ ಭಾರತದ ವಿಧಾನವನ್ನು ವಿವರಿಸಿ, ಈ ಪ್ರದೇಶವನ್ನು ಜಾಗತಿಕ ಬೆಳವಣಿಗೆಗೆ ಕೇಂದ್ರ ಬಿಂದುವಾಗಿದೆ. ಇಂಡೋ-ಪೆಸಿಫಿಕ್ ಪ್ರದೇಶವು ವಿಶ್ವದ ಬೆಳವಣಿಗೆಯ ಎಂಜಿನ್ ಆಗಿ ಹೊರಹೊಮ್ಮುತ್ತಿದೆ. ಆಸಿಯಾನ್ ಜೊತೆಗಿನ ಪಾಲುದಾರಿಕೆಯಲ್ಲಿ ಭಾರತವು ಪ್ರದೇಶದಾದ್ಯಂತ ಅಭಿವೃದ್ಧಿ, ಶಾಂತಿ ಮತ್ತು ಸ್ಥಿರತೆಗೆ ಬದ್ಧವಾಗಿದೆ ಎಂದು ಹೇಳಿದರು.



**ಮೋದಿ- ಇಬ್ರಾಹಿಂ ಮಾತುಕತೆ**

ಪ್ರಧಾನಿ ನರೇಂದ್ರ ಮೋದಿ ಅವರು ಮಲೇಷ್ಯಾದ ಪಿಎಂ ಅನ್ವರ್ ಇಬ್ರಾಹಿಂ ಅವರೊಂದಿಗೆ ಇಂದು ಮಹತ್ವದ ವ್ಯಾಪಕ ಮಾತುಕತೆ ನಡೆಸಿದರು. ರಕ್ಷಣಾ ಮತ್ತು ಭದ್ರತಾ ಸಂಬಂಧಗಳನ್ನು ಹೆಚ್ಚಿಸುವುದು ಮತ್ತು ಆರ್ಥಿಕ ಮತ್ತು ನಾವೀನ್ಯತೆ ಪಾಲುದಾರಿಕೆಯನ್ನು ಹೆಚ್ಚಿಸುವುದು ಸೆಮಿಕಂಡಕ್ಟರ್ ಸೇರಿ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರವನ್ನು ಒದಗಿಸುವ ಹಲವಾರು ಒಪ್ಪಂದಗಳಿಗೆ ಎರಡೂ ಕಡೆಯವರು ಸಹಿ ಹಾಕುವ ನಿರೀಕ್ಷೆ ಇದೆ.

ಮೋದಿ ಅವರಿಗೆ ಕೌಲಾಲಂಪುರದಲ್ಲಿ ಭವ್ಯವಾದ ರೆಡ್ ಕಾರ್ಪೆಟ್ ಸ್ವಾಗತ ಕೋರಲಾಯಿತು. ಇಬ್ರಾಹಿಂ ಅವರನ್ನು ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು, ಇದು ದ್ವಿಪಕ್ಷೀಯ ಸಂಬಂಧಗಳಲ್ಲಿ ಹೊಸ ಆವೇಗವನ್ನು ಸೂಚಿಸುತ್ತದೆ.ಮಾತುಕತೆಗೆ ಮುಂಚಿತವಾಗಿ, ಇಂದು ಬೆಳಿಗ್ಗೆ ಪೆರ್ಡಾನಾ ಪುತ್ರದಲ್ಲಿ ಮೋದಿಗೆ ವಿಧ್ಯುಕ್ತ ಸ್ವಾಗತ ನೀಡಲಾಯಿತು. ಭಾರತವು ನಾಗರಿಕ, ಐತಿಹಾಸಿಕ ಮತ್ತು ಜನರಿಂದ ಜನರಿಗೆ ಸಂಬಂಧಗಳಲ್ಲಿ ನೆಲೆಗೊಂಡಿರುವ ಮಲೇಷ್ಯಾದೊಂದಿಗೆ ನಿಕಟ ಬಾಂಧವ್ಯವನ್ನು ಹಂಚಿಕೊಳ್ಳುತ್ತದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಭಾರತ ಮತ್ತು ಮಲೇಷ್ಯಾ ನಡುವಿನ ಐತಿಹಾಸಿಕ ಸಂಬಂಧಗಳು ಸ್ಥಿರವಾದ ಪ್ರಗತಿಯನ್ನು ಕಂಡಿವೆ. ಮಲೇಷ್ಯಾಗೆ ತೆರಳುವ ಮುನ್ನ ಮೋದಿ ಅವರು ಪ್ರಧಾನಿ ಅನ್ವರ್ ಇಬ್ರಾಹಿಂ ಅವರೊಂದಿಗಿನ ನನ್ನ ಚರ್ಚೆಗಳನ್ನು ಮತ್ತು ನಮ್ಮ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಹೆಚ್ಚಿಸುವುದನ್ನು ಎದುರು ನೋಡುತ್ತಿದ್ದೇನೆ ಎಂದು ಎಕ್ಸ್ ಮಾಡಿದ್ದರು.

ನಮ್ಮ ರಕ್ಷಣೆ ಮತ್ತು ಭದ್ರತಾ ಸಂಬಂಧಗಳನ್ನು ಗಾಢವಾಗಿಸಲು, ನಮ್ಮ ಆರ್ಥಿಕ ಮತ್ತು ನಾವೀನ್ಯತೆ ಪಾಲುದಾರಿಕೆಯನ್ನು ಹೆಚ್ಚಿಸಲು ಮತ್ತು ನಮ್ಮ ಸಹಯೋಗವನ್ನು ಹೊಸ ಕ್ಷೇತ್ರಗಳಿಗೆ ವಿಸ್ತರಿಸಲು ನಾವು ಗುರಿಯನ್ನು ಹೊಂದಿದ್ದೇವೆಂದು ಅವರು ಹೇಳಿದ್ದರು.

## ಸಾರಿಗೆ ಸಂಸ್ಥೆಯ ಖಾಲಿ ಜಾಗ ಪ.ಪಂ.ಗೆ : ಚರ್ಚೆ ಬಳಿಕ ನಿರ್ಧಾರ

» ಮೊದಲನೇ ಪುಟದಿಂದ

ಮಾಡಿಕೊಳ್ಳುತ್ತಿಲ್ಲ. ಇಡೀ ಬಸ್ ನಿಲ್ದಾಣದಲ್ಲಿ ಖಾಸಗಿ ವಾಹನಗಳ ನಿಲುಗಡೆಯಾಗುತ್ತಿದೆಯೆಂಬ ಪ್ರಶ್ನೆಗೆ ಉತ್ತರಿಸಿದ ಅವರು, ಪೊಲೀಸರು ಸಾರ್ವಜನಿಕರ ರಕ್ಷಣೆಗೆ ಆದ್ಯತೆ ನೀಡಬೇಕು. ಬಸ್ ನಿಲ್ದಾಣ, ಶಾಲಾ ಕಾಲೇಜು ಬಿಡುವ ವೇಳೆ ಪೊಲೀಸರು ಸ್ಥಳಗಳಿಗೆ ಭೇಟಿ ನೀಡಿ ಗಮನ ಹರಿಸಬೇಕಿದೆ. ಈ ಬಗ್ಗೆ ಪೊಲೀಸ್ ಹಿರಿಯ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕೆಂದರು.

ಶಾಸಕ ಎ.ಮಂಜು ಅವರು ಮಾತನಾಡಿ, ಈ ಹಿಂದೆಯೂ ರಾಮಲಿಂಗಾ ರೆಡ್ಡಿ ಅವರು ಸಾರಿಗೆ ಸಚಿವರಾಗಿದ್ದಾಗ ತಾಲ್ಲೂಕಿನ ಬಸ್ ನಿಲ್ದಾಣಗಳ ಅಭಿವೃದ್ಧಿಗೆ ನೆರವಾಗಿದ್ದಾರೆ. ಅನಕೃ ವೃತ್ತದಲ್ಲಿ ಪಾಳು ಬಿದ್ದಿರುವ ಹಳೆ ಬಸ್ ನಿಲ್ದಾಣ ಜಾಗವನ್ನು ಪಟ್ಟಣ ಪಂಚಾಯಿತಿಗೆ ಬಿಟ್ಟುಕೊಟ್ಟರೆ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಈ ದಿಸೆಯಲ್ಲಿ ಸಚಿವರು ಕ್ರಮ ಕೈಗೊಳ್ಳುವ ಭರವಸೆ ಇದೆ ಎಂದರು.

## ಶತಾಯುಷಿ ಸಾವಿತ್ರಮ್ಮಗೆ ಕುಟುಂಬಸ್ಥರ ಪಾದಪೂಜೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ನಾಡನಹಳ್ಳಿ ಗ್ರಾಮದಲ್ಲಿ ಶತಾಯುಷಿ ಸಾವಿತ್ರಮ್ಮ (101) ಅವರಿಗೆ ಕುಟುಂಬಸ್ಥರು ಭಾನುವಾರ ಪಾದಪೂಜೆ ನೆರವೇರಿಸಿ ಅವರ ಆರೋಗ್ಯಕ್ಕಾಗಿ ಪ್ರಾರ್ಥಿಸಿದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಹೆಚ್.ಎನ್. ಲೋಕೇಶ್ ಅವರು ಮಾತನಾಡಿ, ಮೂಲ ಆಹಾರ ಪದ್ಧತಿ ಅನುಸರಿಸುತ್ತಿದ್ದ ನಮ್ಮ ಪೂರ್ವಜರು ನೂರಾರು ವರ್ಷಗಳ ಕಾಲ ಆರೋಗ್ಯವಂತರಾಗಿ ಬದುಕುತ್ತಿದ್ದರು. ಸಾವಿತ್ರಮ್ಮ ಕೂಡ ನೂರು ವರ್ಷಗಳನ್ನು ಪೂರೈಸಿದ್ದು ಅದಕ್ಕೆ ಅವರ ಜೀವನ ಶೈಲಿಯೇ ಕಾರಣವೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಸಕ್ತ ದಿನಗಳಲ್ಲಿ ಆಧುನಿಕ ಜೀವನ ಶೈಲಿ ಹಾಗು ಆಹಾರ ಪದ್ಧತಿಯ ಬದಲಾವಣೆ ಪರಿಣಾಮ ಆರೋಗ್ಯಯುತ ಬದುಕು ಕಣ್ಮರೆಯಾಗುತ್ತಿದೆ. ಬಾಳಿ ಬದುಕಬೇಕಾದ ಜೀವಗಳು ಅನಾರೋಗ್ಯದಿಂದ ಬಳಲುತ್ತಿವೆ. ಆರೋಗ್ಯದ ಜೊತೆಗೆ ಜನರ ಮನಸ್ಥಿತಿಯೂ ಸಹ ಬದಲಾವಣೆಗೊಂಡಿದೆ. ಗುರು-ಹಿರಿಯರಿಗೆ ಗೌರವ ನೀಡುತ್ತಿಲ್ಲ. ಹೆತ್ತವರನ್ನು ನಿರ್ಲಕ್ಷಿಸುವ ಸ್ಥಿತಿ ನಿರ್ಮಾಣವಾಗಿದೆ. ಪರಿಣಾಮ ವೃದ್ಧಾಶ್ರಮಗಳ ಸಂಖ್ಯೆಯು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಪೂರ್ವಕಾಲದಲ್ಲಿ ಅವಿಭಕ್ತ ಕುಟುಂಬ ಎಂದರೆ ಸುಮಾರು 30 ರಿಂದ 70 ಜನರು ಒಂದೇ ಮನೆಯಲ್ಲಿ ವಾಸವಾಗುತ್ತಿದ್ದರು. ಅಂದು ಮನೆಗಳಲ್ಲಿ ಸುಖ, ಶಾಂತಿ ಹಾಗು ನೆಮ್ಮದಿ ಇತ್ತು. ಇತ್ತೀಚಿನ ವರ್ಷಗಳಿಂದ ಶಿಕ್ಷಣ ದೊಂದಿಗೆ ಆಧುನಿಕತೆ ಬದಲಾದಂತೆಲ್ಲ ವಿಭಕ್ತ ಕುಟುಂಬಗಳು ಹೆಚ್ಚಾಗಿದ್ದು ಬಹುತೇಕ ಕುಟುಂಬಗಳಲ್ಲಿ ನೆಮ್ಮದಿಗೆ ಜಾಗವಿಲ್ಲದಂತಾಗಿದೆ ಎಂದರು. ಶತಾಯುಷಿ ಸಾವಿತ್ರಮ್ಮ ಅವರ ಮೊಮ್ಮಗ ಆನಂದ್ ಕುಮಾರ್ ಹಾಗು ಕುಟುಂಬಸ್ಥರು ಪಾದಪೂಜೆ ನೆರವೇರಿಸಿದರು.

# ಮಕ್ಕಳಲ್ಲಿ ವೈಜ್ಞಾನಿಕ ಚಿಂತನೆ ಬೆಳೆಸುವುದು ಅತ್ಯವಶ್ಯಕ

• ಪ್ರಜೋದಯ ವರದಿ

**ಹಾಸನ:** ಮಕ್ಕಳಿಗೆ ವೈಜ್ಞಾನಿಕ ಮನೋಭಾವ ಬೆಳೆಸುವುದು ಬಹಳ ಮುಖ್ಯವೆಂದು ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ರಾಜ್ಯಾಧ್ಯಕ್ಷ ಹುಲಿಕಲ್ ನಟರಾಜ್ ಅವರು ಹೇಳಿದರು.

ನಗರದ ಕುವೆಂಪು ನಗರದಲ್ಲಿರುವ ಲಯನ್ಸ್ ಕ್ಲಬ್ ಭವನದಲ್ಲಿ ಭಾನುವಾರ ಲಯನ್ಸ್ ಕ್ಲಬ್ ಹಾಸನ ಹಾಗು ದೊಡ್ಡಬಳ್ಳಾಪುರ ಅಂತರ್ ಜಿಲ್ಲಾ ಟ್ವಿನ್ ಕ್ಲಬ್ ಸಭೆ ಮತ್ತು ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್‌ನ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಣ, ಆರೋಗ್ಯ, ಕೃಷಿ ಸೇರಿ ಎಲ್ಲಾ ಕ್ಷೇತ್ರಗಳಲ್ಲೂ ವಿಜ್ಞಾನಾಧಾರಿತ ಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ಮಾತ್ರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಾಧ್ಯವಾಗುತ್ತದೆ. ವೈದ್ಯಕೀಯ ಚಿಕಿತ್ಸೆಯ ಬದಲು ಮೂಢನಂಬಿಕೆಯಿಂದ ಹಿಂದೆ ಹೋಗುವುದು ಅಪಾಯಕಾರಿ ಎಂದರು.

ಮಕ್ಕಳಲ್ಲಿ ಪ್ರಶ್ನಿಸುವ ಗುಣ, ತರ್ಕಬದ್ಧ ಚಿಂತನೆ ಹಾಗು ಸಾಕ್ಷ್ಯಾಧಾರಿತ ನಂಬಿಕೆಗಳು ಸಮಾಜದ ಪ್ರಗತಿಗೆ ದಾರಿ ಮಾಡಿಕೊಡುತ್ತವೆ. ಮೂಢನಂಬಿಕೆಗಳಿದ ದೂರವಿದ್ದು, ವಿಜ್ಞಾನವನ್ನು ಜೀವನದ ಭಾಗವಾಗಿಸಿಕೊಂಡಾಗ ಮಾತ್ರ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ. ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿಸಲು ನಾನು ವಿಜ್ಞಾನಿ ಎಂಬ ಕಾರ್ಯಕ್ರಮ ನಡೆಸುತ್ತಿದ್ದು, ಯಶಸ್ವಿಯಾಗಿದೆ ಎಂದರು.



ದೊಡ್ಡಬಳ್ಳಾಪುರ ಲಯನ್ಸ್ ಕ್ಲಬ್ 75 ಲ.ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿದೆ. ಡಯಾಲಿಸಿಸ್ ಹಾಗು ಮಾನಸಿಕ ಆಸ್ಪತ್ರೆ ಆಪ್ತ ಸಮಾಲೋಚನೆ ನಡೆಸಲಾಗುತ್ತಿದ್ದು, ಈ ವರ್ಷ ದಾನಿಗಳಿಂದ ಹೆಚ್ಚಿನ ಸಿಎಸ್ ಆರ್ ಫಂಡ್ ಬರುತ್ತಿದ್ದು, ಕಣ್ಣಿನ ಪರೀಕ್ಷೆ ಮತ್ತು ಚಿಕಿತ್ಸೆ ನೀಡಲು ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ರಾಜ್ಯದ 93 ಕ್ಲಬ್‌ನ ಸದಸ್ಯರು ಉಚಿತವಾಗಿ ಪರೀಕ್ಷೆ ಮಾಡಿಸಿಕೊಳ್ಳಬಹುದಾಗಿದೆ. ಯತ್ರೋಪಕರಣಗಳ ಖರೀದಿಗೆ 1.5 ಕೋ. ರೂ. ಅಗತ್ಯವಾಗಿದ್ದು, ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರ ಬಳಿ ಸಹಾಯ ಕೇಳಲಾಗುವುದೆಂದು ಮಾಹಿತಿ ನೀಡಿದರು.

ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಜಿಲ್ಲಾಧ್ಯಕ್ಷ ರವಿ ನಾಕಲಗೂಡು ಅವರು ಮಾತನಾಡಿ, ದೊಡ್ಡಬಳ್ಳಾಪುರದಲ್ಲಿ ಇತ್ತೀಚೆಗೆ ನಡೆದ ನಾನು ವಿಜ್ಞಾನಿ ಎಂಬ ಕಾರ್ಯಕ್ರಮದಲ್ಲಿ 162 ವಿದ್ಯಾರ್ಥಿಗಳು ಟಿಲಿಸ್ಕೋಪ್ ತಯಾರಿಸಿ ಏಷ್ಯಾ ಹಾಗು ಇಂಡಿಯಾ ಬುಕ್ ಆಫ್ ರೆಕಾರ್ಡ್ ದಾಖಲೆ ಮಾಡಿದ್ದಾರೆ. ಜಿಲ್ಲೆಯ ಪುಷ್ಪಗಿರಿಯಲ್ಲಿ ಏಪ್ರಿಲ್ ಅಂತ್ಯದಲ್ಲಿ ನಡೆಯುವ ನಾನು ವಿಜ್ಞಾನಿ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಭಾಗವಹಿಸಲಿದ್ದು, ಇನ್ನ ಹೆಚ್ಚಿನ ದಾಖಲೆ ಮಾಡುವ ಸಾಧನೆಯನ್ನು ಸಾವಿರಾರು ವಿದ್ಯಾರ್ಥಿಗಳು ಮಾಡಲಿದ್ದಾರೆಂದು ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಾಸನ ಲಯನ್ಸ್ ಕ್ಲಬ್ ಜಿಲ್ಲಾಧ್ಯಕ್ಷ ರಮೇಶ್ ವಹಿಸಿದ್ದರು. ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಗೌರವಾಧ್ಯಕ್ಷ ಕಮಲ್‌ಕುಮಾರ್, ರವಿಕುಮಾರ್, ದೊಡ್ಡಬಳ್ಳಾಪುರ ಲಯನ್ಸ್‌ಕ್ಲಬ್ ಅಧ್ಯಕ್ಷ ನಂಜುಡೇಶ್ವರ, ಜಗದೀಶ್, ಹಾಸನ ಲಯನ್ಸ್ ಕ್ಲಬ್ ಕಾರ್ಯದರ್ಶಿ ಶಿವಸ್ವಾಮಿ, ಖಜಾಂಚಿ ಚನ್ನೇಗೌಡ, ಕಾರ್ಯನಿರತ ಪತ್ರಕರ್ತ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ ಮತ್ತಿತರರಿದ್ದರು.

## ಅಭಿವೃದ್ಧಿಗಿಂತ ರಾಜಕೀಯ ಕಾದಾಟವೇ ಮುಖ್ಯ

» ಮೊದಲನೇ ಪುಟದಿಂದ

ಮಾತನಾಡಿರುವುದು ಬೇಡ. ಪಕ್ಷದ ಬಗ್ಗೆ ನಿಯತ್ತು, ನಿಷ್ಠೆ ಇಲ್ಲದವರನ್ನು ನಾವು ಜೊತೆಯಲ್ಲಿಟ್ಟುಕೊಳ್ಳಬೇಕಾ. ಪದೇ ಪದೇ ಅವರ ಹೆಸರು ಪ್ರಸ್ತಾಪ ಮಾಡಬೇಡಿ. ಅಂತಹವರನ್ನು ಜೊತೆಯಲ್ಲಿಟ್ಟುಕೊಂಡು ಓಡಾಡಬೇಕಾ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ನಿರಂತರವಾಗಿ ಜೆಡಿಎಸ್ ಪಕ್ಷವನ್ನೇ ಟಾರ್ಗೆಟ್ ಮಾಡುತ್ತಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರನ್ನು ರಾಜಕೀಯವಾಗಿ ಮುಗಿಸುವ ಪ್ರಯತ್ನ ನಡೆಯುತ್ತಿದೆ. ಅಧಿಕಾರಿಗಳನ್ನು ಯಾವ ರೀತಿ ದುರುಪಯೋಗ ಮಾಡಿಕೊಂಡರೆಂಬುದು ಗೊತ್ತಿದೆ ಎಂದರು.

ಮೆಟ್ರೋ ದರ ಏರಿಕೆ: ರಾಜ್ಯ ಸರ್ಕಾರ ಸುಳ್ಳು

ಬೆಂಗಳೂರು ಮೆಟ್ರೋ ರೈಲು ಪ್ರಯಾಣ ದರ ಬೆಲೆ ಏರಿಕೆಗೆ ಕೇಂದ್ರ ಸರ್ಕಾರ ಹೊಣೆ ಎಂದು ರಾಜ್ಯ ಸರ್ಕಾರ ಸುಳ್ಳು ಹೇಳುತ್ತಿದೆ. ಕೇಂದ್ರದ ಜೊತೆ ಸುಖಾಸುಮ್ಮನೆ ಸಂಘರ್ಷ ಏಕೆ. ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯದ ನಡುವೆ ಉತ್ತಮ ಬಾಂಧವ್ಯ ಇರಬೇಕು. ಎಲ್ಲದಕ್ಕೂ ಕೇಂದ್ರದ ಕಡೆ ಬೆರಳು ತೋರಿಸುವ ಕೆಲಸವನ್ನು ಬಿಡಬೇಕು. ಪ್ರಧಾನ ಮಂತ್ರಿಯನ್ನು ಬೀದಿಯಲ್ಲಿ ನಿಂತು ಬಾಯಿಗೆ ಬಂದಂತೆ ಬೈಯ್ಯೋದು, ಆ ಮೇಲೆ ಪತ್ರ ಕಳಿಸುವ ವರ್ತನೆಯನ್ನು ರಾಜ್ಯ ಸರ್ಕಾರ ಬದಲಿಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

## ಹೈಕಮಾಂಡ್ ಮೌನವಾಗಿದೆ ಎಂದರೆ, ನಾಯಕತ್ವ ಬದಲಾವಣೆ ಇಲ್ಲವೆಂದರ್ಥ : ಪರಮೇಶ್ವರ್

ಬೆಂಗಳೂರು : ನಾಯಕತ್ವದ ವಿಚಾರವಾಗಿ ಹೈಕಮಾಂಡ್ ನಾಯಕರು ಯಾವುದೇ ತೀರ್ಮಾನ ತೆಗೆದುಕೊಳ್ಳದೆ ಮೌನವಾಗಿದ್ದಾರೆ ಎಂದರೆ, ಯಾವುದೇ ಬದಲಾವಣೆ ಇಲ್ಲವೆಂದೇ ಅರ್ಥವೆಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ.

## ಫೆ. 28ಕ್ಕೆ ರಾಜ್ಯ ಮಟ್ಟದ ಶೈಕ್ಷಣಿಕ ಕಾರ್ಯಾಗಾರ

• ಪ್ರಜೋದಯ ವರದಿ

**ಸಕಲೇಶಪುರ:** ಬೆಂಗಳೂರಿನ ಅರಮನೆ ಮೈದಾನದಲ್ಲಿ ಫೆ. 28ರಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ ರಾಜ್ಯ ಮಟ್ಟದ ಶೈಕ್ಷಣಿಕ ಕಾರ್ಯಗಾರ, ಧನ್ಯತಾ ಸಮಾರಂಭ, ಸಂಘದ ಸುವರ್ಣ ಮಹೋತ್ಸವ ಹಾಗು ಉತ್ಕೃಷ್ಟ ಸೇವಾ ಗೌರವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಚೈತ್ರಾ ನಾಯಕರಹಳ್ಳಿ ಅವರು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಅನುಕೂಲಕ್ಕೆ ತಕ್ಕಂತೆ ಶೈಕ್ಷಣಿಕ ವ್ಯವಸ್ಥೆ ಬಲಪಡಿಸುವುದು ಕಾರ್ಯಾಗಾರದ ಉದ್ದೇಶ. ವಿವಿಧ ಕ್ಷೇತ್ರಗಳ ತಜ್ಞರನ್ನು ಆಹ್ವಾನಿಸಿ ಚರ್ಚಿಸಲಾಗುವುದು. ಸಂಘವು 50 ವರ್ಷ ಪೂರ್ಣಗೊಳಿಸಿರುವ ಹಿನ್ನಲೆಯಲ್ಲಿ ಸುವರ್ಣ ಮಹೋತ್ಸವ ಆಚರಿಸಲಾಗುತ್ತಿದೆ. ಶಿಕ್ಷಕರ ಪರವಾಗಿ ಸರ್ಕಾರ ಕೈಗೊಂಡಿರುವ ನಿರ್ಣಯಗಳಿಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗು ಶಿಕ್ಷಣ ಸಚಿವರಿಗೆ ಗೌರವಸಮರ್ಪಿಸಲಾಗುವುದೆಂದರು.

ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಿಕ್ಷಣ ಸಚಿವ ಮಧು ಬಂಗಾರಪ್ಪ, ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್,




ಗೌರವಾಧ್ಯಕ್ಷ ನಾಗೇಶ್, ಪ್ರಧಾನ ಕಾರ್ಯದರ್ಶಿ ನಾಗೇಶ್ ಚೇತನ್ ಭಾಗವಹಿಸಲಿದ್ದಾರೆ.

ಸಂಘದ ತಾಲ್ಲೂಕು ಅಧ್ಯಕ್ಷ ಬಸವರಾಜ್ ಅವರು ಮಾತನಾಡಿ, ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿರುವ ಸಮಾವೇಶವು ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕೆ ವೇದಿಕೆಯಾಗಲಿದೆ ಎಂದರು.

ತಾಲ್ಲೂಕು ಕಾರ್ಯದರ್ಶಿ ದೊರೇಶ್ ಅವರು ಮಾತನಾಡಿ, ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಿಎಲ್ ಡಿಆರ್ ನಿಯಮಗಳು ದೊಡ್ಡ ಸಮಸ್ಯೆಯಾಗಿದ್ದವು. ಈ ನಿಯಮಗಳಿಂದ ಬಡ್ತಿ ಪ್ರಕ್ರಿಯೆ ಸ್ಥಗಿತಗೊಂಡು ಸಾವಿರಾರು ಶಿಕ್ಷಕರು ವರ್ಷಗಳ ಕಾಲ ಒಂದೇ ಹುದ್ದೆಯಲ್ಲಿ ಸೇವೆ ಸಲ್ಲಿಸುವಂತಾಗಿತ್ತು. ಈ ಅನ್ಯಾಯದ ವಿರುದ್ಧ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ನಿರಂತರವಾಗಿ ಸರ್ಕಾರದ ಗಮನ ಸೆಳೆದ ಪರಿಣಾಮ ಸರ್ಕಾರ ಮಾನವೀಯ ದೃಷ್ಟಿಕೋನದಿಂದ ಸಿಎಲ್‌ಡಿಆರ್ ನಿಯಮಗಳಿಗೆ ಸಡಿಲಿಕೆ ನೀಡಿದ್ದು, ಬಡ್ತಿ ಸಮಸ್ಯೆಗಳಿಗೆ ಪರಿಹಾರ ದೊರೆತಿದೆ ಎಂದು ಹೇಳಿದರು. ಈ ನಿರ್ಣಯದಿಂದ ರಾಜ್ಯದ ಸುಮಾರು ಒಂದು ಲಕ್ಷ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಲಾಭವಾಗಿದ್ದು, ಶಿಕ್ಷಕರಲ್ಲಿ ಉತ್ಸಾಹ ಹಾಗು ಆತ್ಮವಿಶ್ವಾಸ ಮೂಡಿದೆ ಎಂದರು.

ಶಿಕ್ಷಕರ ಸಂಘದ ಜಿಲ್ಲಾ ಉಪಾಧ್ಯಕ್ಷ ಮಂಜುನಾಥ್ ಹಾಜರಿದ್ದರು.

## ವ್ಯವಹಾರ ಜ್ಞಾನ ಬೆಳೆಸಲು ಮಕ್ಕಳ ಸಂತೆ ಸಹಕಾರಿ




• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಶೈಕ್ಷಣಿಕ ಹಂತದಿಂದಲೇ ವಿದ್ಯಾರ್ಥಿಗಳಲ್ಲಿ ವ್ಯವಹಾರ ಜ್ಞಾನ ಬೆಳೆಸಲು ಮಕ್ಕಳ ಸಂತೆ ಪ್ರಮುಖ ವೇದಿಕೆಯಾಗುತ್ತದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕುಸುಮಾ ರಾಣಿ ಅವರು ಹೇಳಿದರು.

ಪಟ್ಟಣದ ಶಾಲಿನಿ ಇಂಟರ್ ನ್ಯಾಷನಲ್ ಸ್ಕೂಲ್ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ಮಕ್ಕಳ ಸಂತೆ ಹಾಗು ಆಹಾರ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಮಾಜದಲ್ಲಿ ಬದುಕಲು ಸಾಮಾನ್ಯ ಜ್ಞಾನದ ಜೊತೆಗೆ ವ್ಯವಹಾರ ಜ್ಞಾನವು ಅಗತ್ಯವೆಂದರು.

ಉಪ ಪೊಲೀಸ್ ವರಿಷ್ಠಾಧಿಕಾರಿ ಕುಮಾರ್ ಅವರಿ ಮಾತನಾಡಿ, ಶಿಕ್ಷಣದ ಜೊತೆಗೆ ಬದುಕು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಪೂರಕವಾದ ಪಠ್ಯೇತರ ಚಟುವಟಿಕೆಗಳನ್ನು ಕಲ್ಪಿಸುವುದು ಶಾಲೆಗಳ ಜವಾಬ್ದಾರಿಯಾಗಿದೆ. ಆಧುನಿಕ ನಾಗಾಲೋಟದಲ್ಲಿ ಓಡುತ್ತಿರುವ ಜಗತ್ತಿನಲ್ಲಿ ವ್ಯಕ್ತಿತ್ವ ರೂಪಿಸಿಕೊಂಡು ಬದುಕಬೇಕೆಂದರೆ ಶಿಕ್ಷಣದ ಜೊತೆಗೆ ವ್ಯವಹಾರ ಜ್ಞಾನವು ಮುಖ್ಯವಾಗಲಿದೆ ಎಂದರು.

ಶಾಲೆಯಲ್ಲಿ ಸಿಗುವ ಶಿಕ್ಷಣದ ಜೊತೆಗೆ ಮನೆಗಳಲ್ಲಿ ಪಾಲಕರ ನಡೆ-ನುಡಿ ಹಾಗು ಸಂಸ್ಕಾರವೂ ಸಹ ಮಕ್ಕಳ ಬದುಕಿನ ದಾರಿ ದೀಪವಾಗಲಿದೆ. ಪಾಲಕರು ತಮ್ಮ ಮಕ್ಕಳ ದೈನಂದಿನ ಚಟುವಟಿಕೆಗಳ ಮೇಲೆ ಗಮನ ಹರಿಸುವುದು ಒಳ್ಳೆಯದು. ಅದರಿಂದ ಅವರ ಭವಿಷ್ಯವನ್ನು ಉತ್ತಮವಾಗಿ ರೂಪಿಸಲು ಸಾಧ್ಯವಾಗಲಿದೆ ಎಂದು ಪಾಲಕರಿಗೆ ಸಲಹೆ ನೀಡಿದರು.

ಕಳೆದ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಶಾಲೆ ವತಿಯಿಂದ ಅಭಿನಂದಿಸಲಾಯಿತು. ಮಕ್ಕಳ ಸಂತೆ ಹಾಗು ಆಹಾರ ಮೇಳದಲ್ಲಿ ಎಲ್ಲಾ ರೀತಿಯ ಸೊಪ್ಪು, ತರಕಾರಿ ಹಾಗು ಹಣ್ಣುಗಳನ್ನು ವಿದ್ಯಾರ್ಥಿಗಳು ಮಾರಾಟ ಮಾಡಿದರು. ಜೊತೆಗೆ ಪಾನಿಪುರಿ, ವಡಾಪಾವ್, ಬಜ್ಜಿ, ಸಮೋಸ, ಗೀರೈಸ್, ಬಿರಿಯಾನಿ, ಅಕ್ಕಿರೊಟ್ಟಿ, ಎಣ್ಣೆ ಬದನೆಕಾಯಿ, ರವೆ ಉಂಡೆ, ಜಾಮೂನು ಸೇರಿ ವಿವಿಧ ಖಾದ್ಯಗಳನ್ನು ಸಿದ್ಧಪಡಿಸಿ ವ್ಯಾಪಾರ ಮಾಡಿದ್ದು, ಗ್ರಾಹಕರು ಖರೀದಿಸಿ ಪ್ರೋತ್ಸಾಹ ನೀಡಿದರು. ಸಂಸ್ಥೆಯ ಸಂಸ್ಥಾಪಕ ಸಿ.ಎನ್. ನಂಜುಂಡೇಗೌಡ, ಪುರಸಭೆ ಉಪಾಧ್ಯಕ್ಷೆ ರಾಣಿ ಕೃಷ್ಣ, ಕುವೆಂಪು ವೇದಿಕೆ ಅಧ್ಯಕ್ಷ ಕುಂಬಾರಹಳ್ಳಿ ರಮೇಶ್, ಶಿಕ್ಷಕ ವೃಂದ, ಪಾಲಕರು ಇದ್ದರು.


## ಕಣತೂರಿನಲ್ಲಿ ವೀರಭದ್ರೇಶ್ವರ-ದೇವಿರಮ್ಮ ಜಾತ್ರಾ ಸಡಗರ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನ ಕಣತೂರು ಗ್ರಾಮ ದೇವತೆ ಶ್ರೀ ದೇವಿರಮ್ಮ ಮತ್ತು ಶ್ರೀ ವೀರಭದ್ರೇಶ್ವರ ಸ್ವಾಮಿ ಜಾತ್ರೆ, ಕೊಂಡೋತ್ಸವ ಹಾಗು ಸಿಡಿ ಮಹೋತ್ಸವ ನೂರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಪ್ರತಿ ವರ್ಷದಂತೆ ಈ ಬಾರಿಯು ಶುಕ್ರವಾರ ರಾತ್ರಿ ದೇವಿರಮ್ಮನ ಸಹೋದರಿಯರಾದ ವಲಹಳ್ಳಿ ಮತ್ತು ಕಾಮತಿ ಗ್ರಾಮದಲ್ಲಿ ನೆಲೆಸಿರುವ ಮುದಿಯಮ್ಮ, ಕೆಂಪಮ್ಮ, ಬೆಳ್ಳಿ ಮುಖದಮ್ಮ ದೇವರುಗಳು ಕಣತೂರು ಗ್ರಾಮದ ಶ್ರೀ ದೇವಿರಮ್ಮನ ದೇವಿಯ ದೇವಸ್ಥಾನಕ್ಕೆ ಆಗಮಿಸಿದ ದೇವಿಯನ್ನು ಆಂಜನೇಯ ದೇವಸ್ಥಾನದ ಪಕ್ಕದಲ್ಲಿರುವ ಗಂಗೆ ಕಟ್ಟೆಯ ಬಳಿ ಕರೆದೊಯ್ಯಲಾಯಿತು. ನಂತರ ದೇವಿರಮ್ಮ ಹಾಗು ಚೋಮ ದೇವರಿಗೆ ಗಂಗಾಭಿಷೇಕ ಮಾಡಿ ಪೂಜೆ ಸಲ್ಲಿಸಿದ ನಂತರ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು. ಗ್ರಾಮದ ಮುತ್ತೈದೆಯರು ದೇವಿಗೆ ಮಡಿಲಕ್ಕಿ ಅರ್ಪಿಸಿದರು. ಬಳಿಕ ದೇವೀರಮ್ಮ ಮತ್ತು ವೀರಭದ್ರಸ್ವಾಮಿ ಉತ್ಸವ ಮಾಡಲಾಯಿತು. ರಾತ್ರಿಯಿಡೀ ಚೋಮ ದೇವರು ಕುಣಿತವನ್ನು ಭಕ್ತರು ಕಣ್ತುಂಬಿಕೊಂಡು ಕರ್ಪೂರ ಹಚ್ಚಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಶನಿವಾರ ಬೆಳಗಿನ ಸೂರ್ಯೋದಯದ ಸಮಯದಲ್ಲಿ ದೇವಾಸ್ಥಾನದ ಆವರಣದಲ್ಲಿ ಎಲ್ಲಾ ದೇವರ ಮೂರ್ತಿಗಳಿಗೆ ವಿಶೇಷ ಪೂಜೆ ಮಾಡಿ ಪೂಜೆ ನಂತರ ದೇವಾಲಯದ ಮುಂಭಾಗ 7.15ಕ್ಕೆ ಕೊಂಡೋತ್ಸವಕ್ಕೆ ಚಾಲನೆ ನೀಡಲಾಯಿತು. ಗ್ರಾಮದ ಯುವಕರು ದೇವರ ಅಡ್ಡೆಗಳನ್ನು ಹೊತ್ತು ಕೆಂಡ ತುಳಿದು ಭಕ್ತಿಪರವಶರಾದರು. ಸಿಡಿ ಕಾರ್ಯವನ್ನು ಪ್ರತಿವರ್ಷ ನಡೆಸಿಕೊಂಡು ಬಂದಿರುವ ಕಣತೂರು ಗ್ರಾಮದ ಪಾಲಾಕ್ಷ ಅವರು ಕಳೆದ ಮೂರು ದಿನಗಳಿಂದ ಉಪವಾಸ ವ್ರತವನ್ನು ಕೈಗೊಂಡು ಸಂಜೆ



4.30ಕ್ಕೆ ಸಿಡಿ ಮಹೋತ್ಸವವನ್ನು ಯಶಸ್ವಿಯಾಗಿ ನೆರವೇರಿಸಿದರು. ನಾಕಲಗೂಡು, ಕುಂಬಾರಹಳ್ಳಿ, ಗೇಕರವಳ್ಳಿ, ತೊರಳ್ಳಿ, ಭಾವಸುವಳ್ಳಿ, ಸಿದ್ದಾಪುರ, ಕೋಡಿಗೆಹಳ್ಳಿ, ಹಳೆ ಆಲೂರು, ಮರಸು, ಗುಡ್ಡನಹಳ್ಳಿ, ತಾಳೂರು, ಚಿಕ್ಕಕಣಗಾಲು ಕಾರ್ಜುವಳ್ಳಿ, ಕಾಮತಿ, ವಲ್ಲಳ್ಳಿ ಹಾಗು ಸುತ್ತಲಿನ ಗ್ರಾಮಸ್ಥರು ಭಾಗವಹಿಸಿದ್ದರು. ಭಕ್ತರಿಗೆ ಅನ್ನ ಸಂತರ್ಪಣೆ ನೆರವೇರಿತು.

# ನೇಪಾಳ ವಿರುದ್ಧ ಸೋಲು ತಪ್ಪಿಸಿಕೊಂಡ ಇಂಗ್ಲೆಂಡ್

• ಪ್ರಜೋದಯ ವರದಿ

**ಮುಂಬೈ:** ಎರಡು ಬಾರಿಯ ಚಾಂಪಿಯನ್ ಇಂಗ್ಲೆಂಡ್ ತಂಡ ಭಾನುವಾರ ಅನನುಭವಿ ನೇಪಾಳ ಕೈಲಿ ಸ್ವಲ್ಪದರಲ್ಲೇ ಮುಖಭಂಗದಿಂದ ಪಾರಾಯಿತು. ರೋಚಕವಾಗಿದ್ದ ಟಿ-20 ವಿಶ್ವಕಪ್ ಸಿ ಗುಂಪಿನ ಹಣಾಹಣಿಯಲ್ಲಿ ನೇಪಾಳ ತಂಡ ಕೊನೆಯ ಓವರಿನವರೆಗೆ ಹೋರಾಟ ತೋರಿದರೂ, ಇಂಗ್ಲೆಂಡ್ ನಾಲ್ಕು ರನ್‌ಗಳ ಗೆಲುವು ಪಡೆದು ನಿಟ್ಟುಸಿರುಬಿಟ್ಟಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ತಂಡ 7 ವಿಕೆಟ್‌ಗೆ 184 ರನ್ ಹೊಡೆಯಿತು. ಅದಕ್ಕೆ ಉತ್ತರವಾಗಿ ಹಿಮಾಲಯದ ತಪ್ಪಲಿನ ಪುಟ್ಟ ತಂಡ 6 ವಿಕೆಟ್‌ಗೆ 180 ರನ್ ಗಳಿಸಿ ನಿರಾಶೆ ಅನುಭವಿಸಿತು. ವೀರೋಚಿತ ಆಟವಾಡಿದ ಲೋಕೇಶ್ ಬಾಮ್ (ಔಟಾಗದೇ 39, 20 ಎಸೆತ) ಅವರು ನೇಪಾಳ ತಂಡವನ್ನು ಗೆಲುವಿನತ್ತ ಮುನ್ನಡೆಸುವಂತೆ ಕಂಡಿತ್ತು. ಆದರೆ ಅವರಿಗೆ ಗೆಲುವಿನ ಸ್ಪರ್ಶ ನೀಡಲಾಗಲಿಲ್ಲ. ಕೊನೆಯ ಓವರಿನಲ್ಲಿ ನೇಪಾಳ ಗೆಲುವಿಗೆ 10 ರನ್‌ಗಳು ಬೇಕಿದ್ದವು. ಆದರೆ ವೇಗಿ ಸ್ಯಾಮ್ ಕರನ್ ಯಾರ್ಕರ್‌ಗಳನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಿದರು. ತಂಡ ಐದು ರನ್ ಗಳಿಸಲಷ್ಟೇ ಶಕ್ತವಾಯಿತು. 17,000 ಪ್ರೇಕ್ಷಕರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ನೇಪಾಳದ ಅಭಿಮಾನಿಗಳು ತಲೆಮೇಲೆ ಕೈಹೊತ್ತರು.

ನಾಯಕ ರೋಹಿತ್ ಪೌದೆಲ್ (39), ದೀಪೇಂದ್ರ ಸಿಂಗ್ ಐರಿ (39) ಮತ್ತು ಕುಶಲ್



ಭುರ್ತೆಲ್ (29) ಅವರು ತಂಡದ ಹೋರಾಟಕ್ಕೆ ಬಲ ನೀಡಿದ ಬಳಿ ಲೋಕೇಶ್ ಬೀಸಾಟವಾಡಿದರು. ನಾಲ್ಕು ಬೌಂಡರಿ ಜೊತೆ ಎರಡು ಸಿಕ್ಸರ್ ಬಾರಿಸಿದರು. ಜೋಫ್ರಾ ಆರ್ಚರ್ ಎಸೆದ 18ನೇ ಓವರಿನಲ್ಲಿ 22 ರನ್ ಬಾಚುವ ಮೂಲಕ ನೇಪಾಳ ಚಾರಿತ್ರಿಕ ಗೆಲುವಿನತ್ತ ಸಾಗಿತು. ಪೌದೆಲ್ ಮತ್ತು ಐರಿ ಮಧ್ಯೆ ಮೂರನೇ ವಿಕೆಟ್‌ಗೆ 82 ರನ್‌ಗಳ ಜೊತೆಯಾಟವಾಡಿದ್ದರು.

ಇದಕ್ಕೂ ಮೊದಲು ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತಂಡ, ಜೇಕಬ್ ಬೆಥೆಲ್ (55) ಮತ್ತು ನಾಯಕ ಹ್ಯಾರಿ ಬ್ರೂಕ್ (53) ಅವರ ಆಕ್ರಮಣಕಾರಿ ಅರ್ಧ ಶತಕಗಳ ನೆರವಿನಿಂದ 7 ವಿಕೆಟ್‌ಗೆ 184 ರನ್‌ಗಳ ಉತ್ತಮ ಮೊತ್ತ ಗಳಿಸಿತು.

ಎಡಗೈ ಬ್ಯಾಟರ್ ಬೆಥೆಲ್ ತಮ್ಮ ಚೊಚ್ಚಲ ಟಿ-20 ವಿಶ್ವಕಪ್‌ನಲ್ಲಿ ಸಾಮರ್ಥ್ಯ ತೋರಿ 35 ಎಸೆತಗಳಲ್ಲಿ ನಾಲ್ಕು ಬೌಂಡರಿ, ಅಷ್ಟೇ ಸಿಕ್ಸರ್‌ಗಳನ್ನು ಬಾರಿಸಿದರು. ಬ್ರೂಕ್ ಹೊಣೆಯಿಂದ ಆಡಿ 32 ಎಸೆತಗಳ ಇನಿಂಗ್ಸ್‌ನಲ್ಲಿ ನಾಲ್ಕು ಬೌಂಡರಿ, ಮೂರು ಸಿಕ್ಸರ್‌ಗಳನ್ನು ಹೊಡೆದರು.

ಫಿಲ್ ಸಾಲ್ಟ್ (1), ಜೋಸ್ ಬಟ್ಲರ್ (26) ಮತ್ತು ಟಾಮ್ ಬ್ಯಾಂಟಮ್ (2) ಅವರು ಕೇವಲ 57 ರನ್‌ಗಳಾಗುವಷ್ಟರಲ್ಲಿ ನಿರ್ಗಮಿಸಿದರು. ಈ ವೇಳೆ ಬೆಥೆಲ್ ಬ್ರೂಕ್ ನಾಲ್ಕನೇ ವಿಕೆಟ್‌ಗೆ 71 ರನ್ ಸೇರಿಸಿ ಚೇತರಿಕೆ ನೀಡಿದರು. ಆದರೆ ನೇಪಾಳ ಬೌಲರ್‌ಗಳು ಇಂಗ್ಲೆಂಡ್ ದೊಡ್ಡ ಮೊತ್ತ ಗಳಿಸದಂತೆ ತಡೆದರು.

ಕೊನೆಯಲ್ಲಿ ವಿಲ್ ಜಾಕ್ಸ್ 18 ಎಸೆತಗಳಲ್ಲಿ 39 ರನ್ ಸೂರೆ ಮಾಡಿದ್ದರಿಂದ ಇಂಗ್ಲೆಂಡ್ ಸವಾಲಿನ ಮೊತ್ತ ಗಳಿಸಿತು. ವೇಗಿಗಳಾದ ದೀಪೇಂದ್ರ ಐರೀ (23ಕ್ಕೆ2) ಮತ್ತು ನಂದನ್ ಯಾದವ್ (25ಕ್ಕೆ2) ಯಶಸ್ವಿ ಎನಿಸಿದರು.

ಸಂಕ್ಷಿಪ್ತ ಸ್ಕೋರು

ಇಂಗ್ಲೆಂಡ್: 20 ಓವರುಗಳಲ್ಲಿ 7 ವಿಕೆಟ್‌ಗೆ 184 (ಜೋಸ್ ಬಟ್ಲರ್ 26, ಬೆಥೆಲ್ 55, ಹ್ಯಾರಿ ಬ್ರೂಕ್ 53, ವಿಲ್ ಜಾಕ್ಸ್ ಔಟಾಗದೇ 39, ದೀಪೇಂದ್ರ ಐರೀ 23ಕ್ಕೆ2, ನಂದನ್ ಯಾದವ್ 25ಕ್ಕೆ2). ನೇಪಾಳ: 20 ಓವರುಗಳಲ್ಲಿ 6 ವಿಕೆಟ್‌ಗೆ 180 (ಕುಶಲ್ ಭುರ್ತೆಲ್ 29, ರೋಹಿತ್ ಪೌದೆಲ್ 39, ದೀಪೇಂದ್ರ ಸಿಂಗ್ ಐರೀ 44, ಲೋಕೇಶ್ ಬಾಮ್ ಔಟಾಗದೇ 39, ಲಿಯಾಮ್ ಡಾಸನ್ 21ಕ್ಕೆ2).



ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019